# KARNATAK UNIVERSITY, DHARWAD

No. KU-Syndicate/ Proceedings-22/2022-23/ A-37 Date: - 7 JUL 2022.

**"CONFIDENTIAL"**

The Syndicate meeting was held on **24th June, 2022 at 11.30 am** in the Syndicate Hall, Administrative Building. Karnatak University, Dharwad and the proceedings of the Syndicate meeting are as follows:

**The following members were present**

| | | |
|---|---|---|
| 1. | Prof. K.B. Gudasi, Vice-Chancellor K.U.Dharwad | Chairman |
| 2. | Sri. Krishnamurthy B.R., Joint Director, Collegiate Education, Dharwad | Member |
| 3. | Dr. Mallikarjun Patil, K.U. Dharwad | Member |
| 4. | Smt. Hamsaveni N., Dharwad | Member |
| 5. | Dr. K.D. Haveripeth, Salakinakoppa, Dharwad | Member |
| 6. | Dr. Ramesh L. Rathod, Sunkalbidari | Member |
| 7. | Dr.(Smt). Kamala D. Dhawale, Dharwad | Member |
| 8. | Prof. M.K. Shaikh, Bhatakal | Member |
| 9. | Sri Jayaprakash S. Badami, Navalgund | Member |
| 10. | Sri. Prakash Rayakar, Hubballi | Member |
| 11. | Dr. Shantanagouda C. Jakkanagoudar, Shiggaon | Member |
| 12. | Sri Sudhindra Deshpande, Dharwad | Member |
| 13. | Sri Ravikumar Maliger, Dharwad | Member |
| 14. | Dr. B. Basavanagoud., K.U. Dharwad | Member |
| 15. | Dr. C. Krishnamurthy (Evaluation), K.U. Dharwad | Member |
| 16. | Dr.(Smt). A.N. Tamragundi, I/c Finance Officer, K.U. Dharwad | Special Invitee |
| 17. | Sri. Yashpal Kshirsagar. Registrar (Admn), K.U. Dharwad | Member Secretary |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 17 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಕಲಂ ನಂ. | ವಿಷಯ |
|---|---|
| | ದಿನಾಂಕ: 19.11.2021ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. |
| 1) | ದಿನಾಂಕ: 29.12.2021ರ ಸಾಧಾರಣ, ದಿನಾಂಕ: 04-02-2022ರ, ದಿನಾಂಕ: 11-02-2022ರ ವಿಶೇಷ ಸಿಂಡಿಕೇಟ ಸಭೆಯ, ದಿನಾಂಕ 29.03.2022ರ ಸಾಧಾರಣ, ದಿನಾಂಕ 05.05.2022ರ ಹಾಗೂ 02.06.2022ರ ವಿಶೇಷ ಸಿಂಡಿಕೇಟ ಸಭೆಗಳ ನಿರ್ಣಯಗಳ ನಡುವಳಿಗಳನ್ನು ದೃಢೀಕರಿಸಲಾಯಿತು. ಮುಂದುವರೆದು ದಿನಾಂಕ 18.06.2022ರ ವಿಶೇಷ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸಲಾಯಿತು. |

**ಕಲಂ ಸಂಖ್ಯೆ-02: ವಿಷಯ-:** ದಿನಾಂಕ. 22.03.2022 ರಂದು ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಪರಿಶೀಲನೆ ಹಾಗೂ ಸಮಿತಿಯ ಶಿಫಾರಸ್ಸಿನ ಪ್ರಕಾರ ಕವಿವಿ ಬೋಧಕೇತರ ನೌಕರರಿಗೆ ಮುಂಬಡ್ತಿ ಆದೇಶಗಳನ್ನು ಜಾರಿ ಮಾಡುವ ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ.

**ಪ್ರಸ್ತಾವನೆ:**

ಕರ್ನಾಟಕ ವಿಶ್ವವಿದ್ಯಾಲಯದ ಬೋಧಕೇತರ ನೌಕರರ ಮುಂಬಡ್ತಿ ವಿಷಯವನ್ನು ಪರಿಶೀಲಿಸಲು ದಿನಾಂಕ.22.03.2022 ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯು ಈ ಕೆಳಗಿನಂತೆ ಕಾಲಂ ನಂ.03 ರಲ್ಲಿ ತೋರಿಸಿದ ಹುದ್ದೆಗೆ ಕಾಲಂ ನಂ. 4 ರಲ್ಲಿ ತಿಳಿಸಿದ ಅರ್ಹತಾ ದಿನಾಂಕದಿಂದ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡದಲ್ಲಿ ದಾಖಲಾದ WP No. 103023/2021(S-PRO) ರಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶಕ್ಕೆ ಒಳಪಟ್ಟು ಮತ್ತು ಸದರ ವಿಷಯವಾಗಿ ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯಕ್ಕೆ ಪ್ರಸ್ತಾಪಿತ ಪದೋನ್ನತಿ ಸಿಬ್ಬಂದಿಗಳು ಬದ್ಧನಾಗಿರುವುದಾಗಿ ರೂ.20/- ಗಳ ಛಾಪಾ ಕಾಗದದ ಮೇಲೆ ಪ್ರಮಾಣ ಪತ್ರವನ್ನು ಪಡೆದು ಪದೋನ್ನತಿ ಆದೇಶವನ್ನು ನೀಡುವಂತೆ ನಿರ್ಣಯಿಸಲಾಗಿರುತ್ತದೆ.

| Sl. No. | Name of persons likely to be promoted | Promoted Post | Date of Eligibility for Promotion | Remarks |
|---|---|---|---|---|
| 1 | 2 | 3 | 4 | 5 |
| 1. | A.M. Albal (SC) | OS | 24.01.2022 | |
| 2. | Y.B.Chikkagoudar | OS | 01.03.2022 | |
| 3. | K. Santosh | AOS | 24.01.2022 | |
| 4. | M.B.Shahapur | AOS | 01.03.2022 | |
| 5. | T.V. Mutturayappa (ST) | Asst. | 01.09.2021 | |
| 6. | Smt.N.U.Ganji (SC) | Asst. | 24.01.2022 | |

ಅದರಂತೆ, ದಿನಾಂಕ. 22.03.2022 ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿಯು ಈ ಮೇಲೆ ನಮೂದಿಸಿದ ಅನುಕ್ರಮ 2 ರಲ್ಲಿ ಸೂಚಿಸಿದ ಸಿಬ್ಬಂದಿಗೆ ಅವರು ವೇತನ ಮೇಲ್ದರ್ಜೆಕರಣದ ಸೌಲಭ್ಯವನ್ನು ಪಡೆದಿರುವುದರಿಂದ ಮತ್ತು ಈ ಸೌಲಭ್ಯವನ್ನು ಸೌಲಭ್ಯವನ್ನು ಸರ್ಕಾರ ತನ್ನ ದಿನಾಂಕ: 20.02.2016 ರ ಪ್ರಕಾರ ಹಿಂಪಡೆಯಲು ಸ್ಪಷ್ಟ ನಿರ್ದೇಶನವನ್ನು ನೀಡಿದ ಹಿನ್ನಲೆಯಲ್ಲಿ ಸದರಿ ಸ್ಟೆಪ್ಪಿಂಗ್-ಅಪ್ ಸೌಲಭ್ಯವನ್ನು ಹಿಂಪಡೆಯಲು ತೀರ್ಮಾನಿಸಿದ ಕ್ರಮವನ್ನು ಬಾಧಿತ ನೌಕರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ. 104339-104342/2016 (S-RES) & 104343-104346/2016 & 104347-104350/2016 ಗಳ ಮೂಲಕ ಪ್ರಶ್ನಿಸಿ ಮತ್ತು ಈ ಸಂಬಂಧವಾಗಿ ಮಾನ್ಯ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುವ ಪ್ರಯುಕ್ತ ಅವರಿಗೆ ನೀಡಲಾಗಿರುವ ಸ್ಟೆಪ್ಪಿಂಗ್-ಅಪ್ ಸೌಲಭ್ಯವನ್ನು ಹಿಂಪಡೆಯುವ ಕ್ರಮವನ್ನು ತಡೆಹಿಡಿಯಲಾಗಿರುತ್ತದೆ. ಈ ಸನ್ನಿವೇಶದಲ್ಲಿ ಅನುಕ್ರಮ ಸಂಖ್ಯೆ 2 ರ ಸಿಬ್ಬಂದಿಗೆ ಪದೋನ್ನತಿಯನ್ನು ಅವರು ಸಲ್ಲಿಸಿದ ಸೇವಾವಧಿಯನ್ನು ಪರಿಗಣಿಸಿದರೂ ಕೂಡ ಅವರಿಗೆ ಪದೋನ್ನತಿ ಹೊಂದಿದ ಹುದ್ದೆಯ ವೇತನ ಶ್ರೇಣಿ ಅಥವಾ ಬಡ್ತಿ ಮಂಜೂರು ಮಾಡಿದ್ದಲ್ಲಿ ಅದು ಮಾನ್ಯ ಉಚ್ಚನ್ಯಾಯಾಲಯದ ತಡೆಯಾಜ್ಞೆ ಆದೇಶಕ್ಕೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಸಧ್ಯದ ಪರಿಸ್ಥಿತಿಯಲ್ಲಿ ಅವರು ಅಧೀಕ್ಷಕ ಹುದ್ದೆಗೆ ಪದೋನ್ನತಿಗೆ ಶಿಫಾರಸ್ಸು ಮಾಡಿ ಮಾನ್ಯ ಉಚ್ಚನ್ಯಾಯಾಲಯದ ಅಂತಿಮ ನಿರ್ಣಯ ಬರುವವರೆಗೂ ಅವರು

ಕುಲಸಚಿವರು

ಕುಲಪತಿಗಳು

ಪ್ರಸ್ತುತ ಹೊಂದಿದ ವೇತನ ಶ್ರೇಣಿ ಮತ್ತು ಪಡೆಯುತ್ತಿರುವ ಮೂಲ ವೇತನದಲ್ಲಿಯೇ ಮುಂದುವರೆಸಲು ಶಿಫಾರಸ್ಸು ಮಾಡಿ ಇಲಾಖಾ ಪದೋನ್ನತಿ ಸಮಿತಿಯು ನಿರ್ಣಯಿಸಿತು.

ಮುಂದುವರೆದು, ಖಾಲಿಯಿರುವ ಸಹಾಯಕ ಹುದ್ದೆಗೆ ಮುಂಬಡ್ತಿಯನ್ನು ನೀಡುವುದಕ್ಕೆ ಪ್ರಸ್ತಾಪಿತ ಸಿಬ್ಬಂದಿಗಳ ಹೆಸರನ್ನು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಲಾಯಿತು. ಪ್ರಸ್ತುತ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಲಾಖಾ ಪರೀಕ್ಷೆ ಅನುಶಾಸನ ಚಾಲ್ತಿಯಲ್ಲಿರುವುದಿಲ್ಲ. ಕಾರಣ, ಈ ಮೊದಲಿನಿಂದ ನಡೆದುಕೊಂಡು ಬಂದಿರುವಂತೆ ಪ್ರಸ್ತುತ ಸಹಾಯಕ ಹುದ್ದೆಗೆ ಪದೋನ್ನತಿಗೆ ಚಾಲ್ತಿಯಲ್ಲಿರುವ ಮಾನದಂಡನೆಗಳನ್ನೇ ಅನುಸರಿಸಿ 2 ಜನ ಸಿಬ್ಬಂದಿಗಳನ್ನು ಸಹಾಯಕ ಹುದ್ದೆಗೆ ಪದೋನ್ನತಿಗೊಳಿಸಲು ಶಿಫಾರಸ್ಸು ಮಾಡಿ ಇಲಾಖಾ ಪದೋನ್ನತಿ ಸಮಿತಿ ನಿರ್ಣಯಿಸಿತು. ಹಾಗೂ ಸದರಿ 2 ಜನ ಸಿಬ್ಬಂದಿಗಳಿಗೆ ಪದೋನ್ನತಿ ಆದೇಶ ನೀಡಿದ ಒಂದು ವರ್ಷದೊಳಗೆ ಕೆ.ಪಿ.ಎಸ್.ಸಿಯಿಂದ ನಡೆಸಲ್ಪಡುವ ಜನರಲ್ ಲಾ ಭಾಗ-01 ಮತ್ತು ಭಾಗ-2 ಮತ್ತು ಅಕೌಂಟ್ಸ್ ಹೈಯರ್ ಹಾಗೂ ಅಕೌಂಟ್ಸ್ ಲೋಯರ್ ಇಲಾಖಾ ಪರೀಕ್ಷೆಯನ್ನು ತೇರ್ಗಡೆ ಹೊಂದಬೇಕು. ಒಂದು ವೇಳೆ ಇಲಾಖಾ ಪರೀಕ್ಷೆಯನ್ನು ಒಂದು ವರ್ಷದೊಳಗೆ ತೇರ್ಗಡೆ ಹೊಂದದೇ ಇದ್ದರೆ ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ಷರತ್ತನ್ನು ವಿಧಿಸಲು ಇಲಾಖಾ ಪದೋನ್ನತಿ ಸಮಿತಿ ನಿರ್ಣಯಿಸಿತು.

ಆದ್ದರಿಂದ, ಇಲಾಖಾ ಪದೋನ್ನತಿ ಸಮಿತಿ ಶಿಫಾರಸ್ಸಿನ ಪ್ರಕಾರ, ಪ್ರಸ್ತಾಪಿತ ಪದೋನ್ನತಿ ಸಿಬ್ಬಂದಿಗಳು ಬದ್ಧನಾಗಿರುವುದಾಗಿ ರೂ.20/- ಗಳ ಛಾಪಾ ಕಾಗದದ ಮೇಲೆ ಪ್ರಮಾಣ ಪತ್ರವನ್ನು ಪಡೆಯಲು ಹಾಗೂ ಸದರಿ ಸಿಬ್ಬಂದಿಗಳಿಗೆ ಪದೋನ್ನತಿ ಆದೇಶ ನೀಡುವ ವಿಷಯವಾಗಿ ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## <u>ನಿರ್ಣಯ</u>

**ದಿನಾಂಕ. 22.03.2022 ರಂದು ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಪರಿಶೀಲನೆ ಹಾಗೂ ಸಮಿತಿಯ ಶಿಫಾರಸ್ಸಿನ ಪ್ರಕಾರ ಕವಿವಿ ಬೋಧಕೇತರ ನೌಕರರಿಗೆ ಮುಂಬಡ್ತಿ ಆದೇಶಗಳನ್ನು ಜಾರಿ ಮಾಡುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-03: ವಿಷಯ-:** Implementation of Hon'ble High Court Order dated: 03.03.2022 (W.P.No. 117144/2019(S-RES) filed by Dr.Nagaraj R.Halliyavar, Professor, PG Dept.of Journalism and Mass Communication, KU Dharwad regarding pay protection of his previous service is placed before the Syndicate for perusal and the Consideration of the matter regarding filing writ appeal before the division bench with regard to the case of pay protection (W.P.No. 117144/2019(S-RES) of previous service of Dr.Nagaraj.R.Halliyavar, as opined by Sri.M.S.Hiremath, University Advocate vide his letter dated 07.03.2022 and the letter dated:08.04.2022 received from Sri.Ravikumar Maliger, Syndicate Member requesting not to initiate any action with regard to Court Judgement dated: 03.03.2022 (W.P.No.117144/2019(S-RES) before placing it to the Syndicate for perusal.

**Note:**

Letter dated: 08.03.2022 received from Dy.Registrar, Legal cell, KU Dharwad is placed for your kind perusal.

In the said letter, It has been informed that copy the letter dt:07.03.2022 received from Sri.M.S.Hiremath, Advocate is enclosed and requested to obtain clarifications/ circulars if any from the Govt/Finance Dept /Auditors to enable to take a suitable decision in the matter of filing Writ Appeal as suggested by Shri. M.S.Hiremath, University Advocate.

A letter Written by Shri. M.S.Hiremath, University Advocate vide letter dated 07.03.2022 was stated as under W.P.No. 117144/2019 (S –RES) filed by Nagaraj Halliyavar, Case reached the counsel for the petitioner submitted that before joining to the University he was working as Associate Professor in Aided college & after his appointment in University, his pay was not protected and thus endorsement issued by the University that effect required to be quashed by protecting the pay of Dr.Nagaraj Halliayavar as he was getting when he resigned and joined to University. Further he stated that he has made submission that Dr.Nagaraj Halliayavar's resignation is technical resignation & is not entitled to benefit of pay protection in terms of Rule 20 Note 4 of KCSR & requested to the Hon'ble court to dismiss the writ petition. However the Hon'ble by not accepting his submission allowed the writ petition by quoting Rule 41-A of KCSRs, though he submitted that the same is not applicable to Technical resignation. The Hon'ble High Court allowed the writ petition and directed the University to fix the pay scale of petitioner protecting his salary as he getting in the previous service. The time for compliance is given three months and he also informed that he has applied for the cerified copy of the order dated 03.03.2022 and will send the same. It is to be noted herethat the order of the learned single judge is contravention of the provisions of the KCSRs. Hence, the University Advocate Sri.M.S.Hiremath has opined that it is a fit case for filing writ appeal before the division bench & requested to take a decision at the earliest so that without any delay appeal can be filed and he also required the information as per the letter dated 02.12.2021 and informed to consult the auditors and finance department about this and latest stand of the finance department/Government in such cases and take instructions from the Govt about the latest Government Circulars if any in such cases apart from Govt.letter dated 12.04.1999 (Annexure-Q) since it is of the year 1994 on this matter.

ಕುಲಸಚಿವರು ಕುಲಪತಿಗಳು

Accordingly as per the orders of Hon'ble Vice-Chancellor and also as per the suggestion given by University Advocate Sri.M.S.Hiremath, the letter has been written to the Additional Chief Secretary, Higher Education Department, Bangalore with all details requesting him to provide the latest Govt.Circulars/Govt.orders apart from the direction given in the Govt.letter dated 12.04.1999 regarding protection of pay of past service of Dr.Nagaraj.R.Halliyavar, Professor, PG Dept.of Journalism and Mass Communication, KU Dharwad and also about the protection of pay of past service of employees who served in various Govt. Institutions/Universities/Degree Colleges before 01.04.2006 and subsequently who appointed/joined in the various Karnataka State Institutions/Universities/Degree Colleges on or after 01.04.2006 (vide this Office letter No. KU/DPAR/(T-1)/2022/13 dt. 05.04.2022) and the reply from the Government is awaited in this regard.

Further it is bring to your kind notice that **Rule 41(A) (i) & (ii)of KCS** regarding pay protection is as below.

"Notwithstanding anything contained in Rules 20 and 41 of these rules (or anything contained in the recruitment rules in respect of particular services but subject to the Karnataka State Civil Services (**Direct Recruitment to Class III Posts**) (Special)Rules 1970) when a Government Servant appointed to a post or category of posts as a local candidates or as regularly recruited candidate is appointed regularly as per relevant rules of recruitment to any other posts or category of posts, whether in the same or any other department, whether a period of probation is prescribed or not his pay is regulated as follows:

i) Where the appointment is to a post the scale of pay of which is lower than the scale of pay of the post he held last, his pay in his appointment shall be equivalent to the stage of pay which he would have reached had he been appointed to that scale of pay from the date he was initially appointed as a local candidate or as a regularly recruited candidate as the case may be.

ii) Where the appointment is to a post the scale of pay of which is identical with the scale of pay of the post which he held last, his pay in his appointment shall be fixed at the stage which is equal to the pay drawn in the post last held by him.

**Further, the Rule 20 Note – 4 of KCS is as below.**

"When a Government servant who has secured employment in one department of Government under the rules of recruitment, seeks employment on his own accord in another unit or Department or in another cadre or grade in the same department, his lien on the original appointment shall be continued to be maintained provided he has already been confirmed in the post till he is permanently absorbed in the department or cadre in which he is newly appointed and he shall be given the benefit of the past service for purposes of leave and pension. If however, he is temporary in the first appointment, he will cease to have any connection with his old appointment but he shall be given only the benefit of the past service of leave and pension"

ಕುಲಸಚಿವರು

ಕುಲಪತಿಗಳು

Further it is bring to your kind notice that The Deputy Registrar, Dept.of Human Resource and Management, Kuvempu University, Shankaraghatta.(Dist-Shimoga),vide their letter dated 13.11.2019 has enclosed the copy of the Govt.Letter No. ED 111 USV 2018 dt. 27.08.2018 and informed that there is no provision to protect the pay drawn in the previous service of Aided/Govt.Colleges/Govt.Institutions and requested to provide the information regarding the action taken with regard the pay protection cases in our University. In this regard, It has been informed that necessary action has been taken as per Syndicate Res.No.12 dated: 26.10.1998 and Compliance with relevant documents have been submitted to the Auditors as the Auditors have raised the objection for pay protection in some cases.

Further the suitable compliance alongwith the relevant documents has been submitted to the Auditors with regard the objections raised by them for having granted the benefit of pay protection and the reply from the Auditors is awaited and the University is serious and very much concerned about this issue and initiate immediate steps on the basis of reply to be received from the Auditors in this regard. Letter is written to Sri.M.S.Hiremath, University Advocate vide this Office letter No.KU/DPAR(T-1)/2021/1757 dt. 02.12.2021. However, the compliances with relevant documents regarding audit objections of pay protection cases of **some teaching staff** were also placed before Finance Committee, Syndicate and yet to be placed before the Adhoc Committee meeting and the same is under consideration.

**It is submitted that** Dr.Nagaraj.R.Halliyavar has served as Lecturer and Associate Professor in Anjuman Arts,Commerce & Science College, Dharwad from 02.09.1991 to 28.03.2014 before joining to University services on 29.03.2014. Further, he has requested to protect his pay of past service through his requested letters dated: 09.01.2018,07.02.2018, 18.01.2019 & 26.10.2019. In this regard, Dr.Nagaraj.R.Halliyavar has been informed that there is no provision to protect the pay or emoluments to lecturers recruited from Degree Colleges by direct recruitment to the departments as per the direction given in the Govt. letter No. ED 62 UKV 99 dated: 12.04.1999 and also as per Syndicate Resolution No.13 dated: 17.08.2019. (vide this Office letters Nos.3862, 6693, 3699 & 3562 dated: 02.02.2018, 09.01.2019, 12.10.2019 & 11.11.2020).

Further Dr.Nagaraj.R.Halliyavar has filed a Writ Petition No. 117144/2019(S-RES) regarding protection of his pay of past service rendered in Anjuman Arts,Commerce & Science College, Dharwad i.e., from 02.09.1991 to 28.03.2014 and Sri.M.S.Hiremath, University Advocate has submitted the certified copy of the order dated:03.03.2022 of Hon"ble High Court, Dharwad Bench, Dharwad and Dr.Nagaraj.R.Halliyavar vide his letter dated 09.03.2022 has also submitted the Copy of Judgement Order of Hon'ble High Court (Dharwad Bench) dated 03.03.2022 requesting to protect his pay as directed in the Court order and issue him the order at the earliest possible and the Judgement order of the Hon'ble High Court, Dharwad bench, Dharwad is as below.

**"The respondent University is directed to ensure that the pay that the petitioner was getting in his earlier post shall be protected and the same shall be paid to him from the date of his appointment, in accordance with the mandate of Rule 41-A sub clause (ii) of the KCS.**

ಕುಲಸಚಿವರು ಕುಲಪತಿಗಳು

**The University is directed to ensure that all monetary benefits that the petitioner is entitled to as per this order shall be given to the petitioner within a period of 4 months from the date of receipt of copy of this order."**

In this regard, Sri.M.S.Hiremath, University Advocate vide his letter dated 07.03.2022 has opined that it is a fit case for filing writ appeal before the division bench & requested to take a decision at the earliest so that without any delay appeal can be filed & also informed to consult the auditors and finance department about this and latest stand of the finance department/Government in such cases and take instructions from the Govt about the latest Government Circulars if any in such cases apart from Govt.letter dated 12.04.1999 (Annexure-Q) since it is of the year 1994 on this matter. Accordingly., letter has been written to the Additional Chief Secretary, Higher Education Department, Bangalore with all details requesting him to provide the latest Govt.Circulars/Govt.orders apart from the direction given in the Govt.letter dated 12.04.1999 regarding protection of pay of past service cases. (vide this Office letter No. KU/DPAR/(T-1)/2022/13 dt. 05.04.2022) and the reply from the Government is awaited in this regard.

Meanwhile, Sri.Ravikumar Maliger, Syndicate Member has written a letter dated: 08.04.2022 requesting not to initiate any action with regard to Court Judgement dated: 03.03.2022 (W.P.No.117144/2019 (S-RES) before placing it to the Syndicate for perusal.

Hence, the matter of implementation of Hon'ble High Court Order dated: 03.03.2022 (W.P.No. 117144/2019(S-RES) filed by Dr.Nagaraj R.Halliyavar, Professor, PG Dept.of Journalism and Mass Communication, KU Dharwad regarding pay protection of his previous service is placed before the Syndicate for perusal and the Consideration of the matter regarding filing writ appeal before the division bench with regard to the case of pay protection (W.P.No. 117144/2019(S-RES) of previous service of Dr.Nagaraj.R.Halliyavar, as opined by Sri.M.S.Hiremath,' to Court Judgement dated: 03.03.2022 (W.P.No.117144/2019 (S-RES) before placing it to the Syndicate for perusal.

<u>ನಿರ್ಣಯ</u>

**Syndicate resolved to file an appeal against W.P.No 117144/2019 S-RES filed by Dr. Nagaraj R. Halliyavar, Professor, P.G. Dept of Mass Communication and Journalism, K.U. Dharwad. However, only one Syndicate Member Sri.Ravikumar Maliger expressed his dissent.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-04: ವಿಷಯ-:** ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಇವರು ವ್ಯಕ್ತಪಡಿಸಿದ ಆಕ್ಷೇಪಣೆ ಹಿನ್ನೆಲೆಯಲ್ಲಿ, ಯುಜಿಸಿ ನಿಗದಿಪಡಿಸಿದ ನೆಟ್/ಸೆಟ್/ಪಿಎಚ್.ಡಿ. ವಿದ್ಯಾರ್ಹತೆಯನ್ನು ಹೊಂದದಿರುವ 04 ಜನ ಬೋಧಕ ಸಿಬ್ಬಂದಿಗಳ ಪ್ರಕರಣದಲ್ಲಿ ಮುಂದಿನ ಕ್ರಮಜರುಗಿಸುವುದಕ್ಕೆ ಎದುರಾದ ತಾಂತ್ರಿಕ ಸಮಸ್ಯೆಗಳ ಬಗ್ಗೆ ಹಾಗೂ ಬೋಧಕ ಸಿಬ್ಬಂದಿಗಳಾದ ಶ್ರೀಮತಿ. ಜ್ಯೋತಿ. ಎಸ್. ದೊಡ್ಡಮನಿ, ಡಾ.(ಶ್ರೀಮತಿ). ಗೀತಾ. ಎಸ್. ಚವ್ಹಾಣ, ಶ್ರೀಮತಿ. ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ ಇವರು ತಮ್ಮ ಪತ್ರ ದಿನಾಂಕ: 31.03.2022 ರ ಜೊತೆಗೆ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠವು, ಧಾರವಾಡ (WRIT PETITION No. 100610 of 2022 (S-RES) ರಲ್ಲಿ ದಿನಾಂಕ: 14.02.2022 ರಂದು ನೀಡಿದ ಮಧ್ಯಂತರ ತಡೆಯಾಜ್ಞೆಯ ಕುರಿತಂತೆ ಮುಂದಿನ ಕ್ರಮ ಜರುಗಿಸುವ ಬಗ್ಗೆ ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಿದ ಕುರಿತು.

**ಟಿಪ್ಪಣಿ:**

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಇವರು ದಿನಾಂಕ: 31.03.2017 ಕ್ಕೆ ಅಂತ್ಯಗೊಂಡಂತೆ ಸಲ್ಲಿಸಿದ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆ ಸಂಖ್ಯೆ.4.1.5 (ಅನುಬಂಧ-4.5) ರಲ್ಲಿ ಪ್ರಸ್ತಾಪಗೊಂಡ ನಾಲ್ಕು ಜನ ಬೋಧಕ ಸಿಬ್ಬಂದಿಗಳಾದ **ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, ಶ್ರೀಮತಿ.ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ** ಇವರುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಆಡಳಿತ ಮಂಡಳಿ ಸಭೆಗೆ ಮರುನಿವೇದಿಸಲಾಗಿದೆ.

ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ವಿವಿಧ ವಿಭಾಗಗಳಲ್ಲಿನ ಉಪನ್ಯಾಸಕ **(ವೇತನ ಶ್ರೇಣಿ 8000-275-13500)** ಹುದ್ದೆಗಳ ಭರ್ತಿಗಾಗಿ 2000 ರ ರೆಗ್ಯುಲೇಶನ್‌ದ ವಿನಿಯಮಗಳ ಆಧಾರದ ಮೇಲೆ **ದಿನಾಂಕ: 27.09.2008 ರಂದು** ಹೊರಡಿಸಲಾದ ವಿಶ್ವವಿದ್ಯಾಲಯದ ಅಧಿಸೂಚನೆ ಮೇರೆಗೆ ನೇಮಕಾತಿಯ ಎಲ್ಲ ಆಯ್ಕೆ ಪ್ರಕ್ರಿಯೆಗಳು ಸಂಪೂರ್ಣಗೊಂಡಂತೆ ಸದರ 4 ಜನ ಸಿಬ್ಬಂದಿಗಳನ್ನು **"ಉಪನ್ಯಾಸಕ"** ಹುದ್ದೆಗೆ ನೇಮಕ ಮಾಡಿಕೊಳ್ಳಲು ಬಿ.ಓ.ಎ (ನೇಮಕಾತಿ ಮಂಡಳಿ) ದಿನಾಂಕ: 15 & 16.06.2009 ಹಾಗೂ 21 & 22.06.2009 ರಂದು ಜರುಗಿದ ತನ್ನ ಸಭೆಯಲ್ಲಿ ಆಯ್ಕೆ ಮಾಡಿ ಶಿಫಾರಸ್ಸು ಮಾಡಿತ್ತು.

ಆದರೆ, ಸದರ **ದಿನಾಂಕ: 27.09.2008** ರ ವಿಶ್ವವಿದ್ಯಾಲಯದ ನೇಮಕಾತಿ ಅಧಿಸೂಚನೆಯನ್ನು **ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ 60507/2009 ರ ಅರ್ಜಿಯು ತಡವಾಗಿ 2011 ರಲ್ಲಿ ವಿಲೇವಾರಿಯಾಗಿದ್ದ ಕಾರಣದಿಂದಾಗಿ** ನೇಮಕಾತಿ ಆದೇಶಗಳನ್ನು 2011-2012 ರ ಅವಧಿಯಲ್ಲಿ ಹೊರಡಿಸಲಾಗಿದ್ದು, ಆ ಸಮಯದಲ್ಲಿ 2006 ರ ಯುಜಿಸಿ ಮಾರ್ಗಸೂಚಿಗಳು ಜಾರಿಗೆ ಬಂದು, "ಉಪನ್ಯಾಸಕ" ಹುದ್ದೆ "ಸಹಾಯಕ ಪ್ರಾಧ್ಯಾಪಕ" ಎಂದು ಮರುಪದನಾಮಗೊಂಡಿದ್ದರಿಂದ ಸದರ 4 ಜನ ಸಿಬ್ಬಂದಿಗಳನ್ನು **"ಉಪನ್ಯಾಸಕ"** ಎಂದು ನೇಮಕಗೊಳಿಸುವ ಬದಲಾಗಿ **"ಸಹಾಯಕ ಪ್ರಾಧ್ಯಾಪಕ"** ಹುದ್ದೆಗೆ ನೇಮಕ ಮಾಡಿ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿ ರೂ.15600-39100 +ಎಜಿಪಿ.6000 ದಲ್ಲಿ ರೂ.21,600/- ಗಳಿಗೆ ವೇತನ ನಿಗದಿಪಡಿಸಿ ಈ ಕೆಳಗಿನಂತೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

| ಅ.ಸಂ | ಸಿಬ್ಬಂದಿಯ ಹೆಸರು | ನೇಮಕಗೊಂಡ ಹುದ್ದೆ/ವಿಭಾಗ | ನೇಮಕಾತಿ ಆದೇಶ ಪತ್ರ ಸಂಖ್ಯೆ ಹಾಗೂ ದಿನಾಂಕ. | ಸೇವೆಗೆ ಹಾಜರಾದ ದಿನಾಂಕ |
|---|---|---|---|---|
| 1 | ಶ್ರೀಮತಿ.ಜ್ಯೋತಿ. ಎಸ್.ದೊಡ್ಡಮನಿ, | ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 3442/ 20.09.2011 | 28.09.2011 |
| 2 | ಡಾ..(ಶ್ರೀಮತಿ).ಗೀತಾ.ಎಸ್.ಚವ್ಹಾಣ, | ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 3091/ 30.08.2011 | 02.09.2011 |
| 3 | ಡಾ.(ಶ್ರೀಮತಿ).ನಿರುಪಮಾ ಜೆ.ಎಮ್., | ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 2344/ 28.07.2011 | 03.08.2011 |
| 4 | ಶ್ರೀ.ಹರ್ಷಾ.ಡಿ.ನೀಲಗುಂದ, | ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | 5858/ 13.01.2012 | 13.01.2012 |

ಕುಲಸಚಿವರು

ಕುಲಪತಿಗಳು

ತದನಂತರ, ಸದರ 4 ಜನ ಸಿಬ್ಬಂದಿಗಳು ಸಲ್ಲಿಸಿದ ಸೇವಾವಧಿ ಹಾಗೂ ಅರ್ಹತೆಗನುಗುಣವಾಗಿ 2006 ರ ಯುಜಿಸಿ ಮಾರ್ಗಸೂಚಿಗಳಪ್ರಕಾರಬಿ.ಓ.ಎ ಶಿಫಾರಸ್ಸಿಸಿದನ್ವಯ ಈ ಕೆಳಕಂಡಂತೆ ಪದೋನ್ನತಿಗಳನ್ನು ನೀಡಲಾಗಿರುತ್ತದೆ.

| ಅ.ಸಂ | ಸಿಬ್ಬಂದಿಯ ಹೆಸರು | ಪದೋನ್ನತಿ ಹೊಂದಿದ ಹುದ್ದೆ | ಪದೋನ್ನತಿ ದಿನಾಂಕ: | ಪದೋನ್ನತಿ ಆದೇಶ ಪತ್ರ ಸಂಖ್ಯೆ ಹಾಗೂ ದಿನಾಂಕ. |
|---|---|---|---|---|
| 1 | ಶ್ರೀಮತಿ.ಜ್ಯೋತಿ. ಎಸ್.ದೊಡ್ಡಮನಿ. | ಸಹಾಯಕ ಪ್ರಾಧ್ಯಾಪಕ ಎಜಿಪಿ-6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ-7000 | 28.09.2016 | 4954/24.03.2018 |
| 2 | ಡಾ..(ಶ್ರೀಮತಿ).ಗೀತಾ.ಎಸ್.ಚವ್ಹಾಣ, | 1) ಸಹಾಯಕ ಪ್ರಾಧ್ಯಾಪಕ ಎಜಿಪಿ-6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ-7000 | 02.09.2015 | 4958/24.03.2018 |
| | | 2) ಸಹಾಯಕ ಪ್ರಾಧ್ಯಾಪಕ ಎಜಿಪಿ-7000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ-8000 | 02.09.2020 | 1339/26.10.2021 |
| 3 | ಡಾ.(ಶ್ರೀಮತಿ).ನಿರುಪಮಾ ಜೆ.ಎಮ್., | ಸಹಾಯಕ ಪ್ರಾಧ್ಯಾಪಕ ಎಜಿಪಿ-6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ-7000 | 03.08.2016 | 4959/24.03.2018 |
| 4 | ಶ್ರೀ.ಹರ್ಷಾ.ಡಿ.ನೀಲಗುಂದ, | ಸಹಾಯಕ ಪ್ರಾಧ್ಯಾಪಕ ಎಜಿಪಿ-6000 ದಿಂದ ಸಹಾಯಕ ಪ್ರಾಧ್ಯಾಪಕ ಎಜಿಪಿ-7000 | 13.01.2017 | 4952/03.08.2018 |

ಎಮ್.ಫಿಲ್ ಪದವಿಯ ಆಧಾರದ ಮೇಲೆ ನೇಮಕಗೊಂಡ ನೆಟ್/ಸೆಟ್/ಸ್ಲೆಟ್/ಪಿಹೆಚ್‌ಡಿ ವಿದ್ಯಾರ್ಹತೆಯನ್ನು ಹೊಂದದೆ ಇರುವ ನಾಲ್ಕು ಜನ ಬೋಧಕ ಸಿಬ್ಬಂದಿಗಳಾದ ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, ಶ್ರೀಮತಿ.ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ ಇವರುಗಳಿಗೆ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ವೇತನವನ್ನು ನಿಗದಿಪಡಿಸಿ ಅದರಂತೆ ಪಾವತಿಸಿದ ವೇತನದ ಕುರಿತಂತೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಇವರು ಸಲ್ಲಿಸಿದ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆ ಸಂಖ್ಯೆ.4.1.5 (ಅನುಬಂಧ-4.5) ರಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಕ್ಕೆ ಸಂಬಂಧಿಸಿದಂತೆ ಈಗಾಗಲೇ ವಿಸ್ತರಿಸಿದ 2006 ರ ಯುಜಿಸಿ ವೇತನ ಶ್ರೇಣಿಯನ್ನು ಹಿಂಪಡೆಯಲು ವಿಷಯವನ್ನು ಸಿಂಡಿಕೇಟ್ ಸಭೆ ಮುಂದೆ ಮಂಡಿಸಿ ಕ್ರಮವಹಿಸಲಾಗುವುದೆಂದು ದಿನಾಂಕ: 26.10.2021 ರಂದು ಜರುಗಿದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಉತ್ತರವನ್ನು ಸಲ್ಲಿಸಲಾಗಿತ್ತು.

ಅದರಂತೆ, ಈ ವಿಷಯವನ್ನು ದಿನಾಂಕ: 29.12.2021 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿದಾಗ, ಕಲಂ ಸಂಖ್ಯೆ.10 ರಲ್ಲಿ ಆಡಳಿತ ಮಂಡಳಿಯು ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಂಡಿದ್ದು ಇರುತ್ತದೆ.

> **"ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ಆಡಳಿತ ಮಂಡಳಿಯು, ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಶ್ರೀಮತಿ.ಗೀತಾ.ಎಸ್.ಚವ್ಹಾಣ, ಶ್ರೀಮತಿ. ನಿರೂಪಮಾ. ಜೆ.ಎಮ್., ಶ್ರೀ. ಎಚ್.ಡಿ.ನೀಲಗುಂದ ಇವರುಗಳಿಗೆ ಈಗಾಗಲೇ ನಿಗದಿಪಡಿಸಿರುವ 2006 ರ ಯುಜಿಸಿ ವೇತನ ಶ್ರೇಣಿಯು ಸರ್ಕಾರಿ ಆದೇಶ ದಿನಾಂಕ: 24.12.2009 ರಲ್ಲಿನ ನಿರ್ದೇಶನಗಳಿಗೆ ವ್ಯತಿರಿಕ್ತವಾಗಿರುವುದರಿಂದ ಸದರಿ ಸಿಬ್ಬಂದಿಗಳಿಗೆ ಈಗಾಗಲೇ ವಿಸ್ತರಿಸಿರುವ 2006 ರ ಯುಜಿಸಿ ವೇತನ ಶ್ರೇಣಿಯನ್ನು ನಿಯಮಾನುಸಾರ ಹಿಂಪಡೆದು ಹೆಚ್ಚುವರಿಯಾಗಿ ಪಾವತಿಸಲ್ಪಟ್ಟ ವೇತನವನ್ನು ವಸೂಲಾತಿ ಮಾಡಲು ಕ್ರಮವಹಿಸಬೇಕೆಂದು ನಿರ್ಣಯಿಸಿತು."**

ಈತನ್ಮಧ್ಯೆ, ಅಧ್ಯಕ್ಷರು, ಕರ್ನಾಟಕ ಯುನಿವರ್ಸಿಟಿಸ್ ಕಾನ್‌ಸ್ಟಿಟ್ಯೂಯೆಂಟ್ ಟೀಚರ್ಸ್ ಅಸೋಸಿಯೇಶನ್, ಧಾರವಾಡ ಇವರು ದಿನಾಂಕ: 20.01.2022 ರ ತಮ್ಮ ಪತ್ರದಲ್ಲಿ, ಸದರ ಬೋಧಕ ಸಿಂಬಂದಿಗಳಿಂದ ಸಂಘಕ್ಕೆ ಸಲ್ಲಿಸಲ್ಪಟ್ಟ ಮನವಿ ಹಾಗೂ ಶ್ರೀ.ಗುರುನಾಥ ಎಂಬುವವರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯ ನೀಡಿದ ದಿನಾಂಕ 11.12.2019 ರ ತೀರ್ಪು ಹಾಗೂ 2016 ರ ಯುಜಿಸಿ ಪತ್ರದಲ್ಲಿನ ಅಂಶಗಳನ್ವಯ ಯುಜಿಸಿ ನಿಯಮಾವಳಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆಯೆಂದು ಹೇಳುತ್ತ ಸದರ 4 ಜನ ಬೋಧಕ ಸಿಬ್ಬಂದಿಗಳು 11.07.2009 ಕ್ಕಿಂತ ಮೊದಲೇ ಎಮ್.ಫಿಲ್ ಪದವಿಯನ್ನು ಹೊಂದಿದ್ದರಿಂದ ನೆಟ್/ಸೆಟ್/ಪಿಚ್.ಡಿ ಪದವಿಯನ್ನು ಹೊಂದುವುದನ್ನು ಕಡ್ಡಾಯಗೊಳಿಸುವುದು ಸೂಕ್ತವಲ್ಲವಾದ್ದರಿಂದ ದಿನಾಂಕ: 29.12.2021 ರಂದು ಆಡಳಿತ ಮಂಡಳಿ ಕೈಗೊಂಡ ನಿರ್ಣಯವನ್ನು ಕಾರ್ಯಗತಗೊಳಿಸಬಾರದು ಹಾಗೂ ಈ ನಾಲ್ಕು ಜನ ಬೋಧಕ ಸಿಬ್ಬಂದಿಗಳ ವೇತನವನ್ನು ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿಯೇ ಮುಂದುವರೆಸುವಂತೆ ಆಗ್ರಹಿಸಿರುತ್ತಾರೆ.

ಕುಲಸಚಿವರು ಕುಲಪತಿಗಳು

ಆದರೆ, ಪಿಎಚ್.ಡಿ/ನೆಟ್/ಸೆಟ್ ಹೊಂದಿರದ ಸಿಬ್ಬಂದಿಗಳಿಗೆ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ **ಸರ್ಕಾರಿ ಆದೇಶ ಸಂಖ್ಯೆ:ಇಡಿ 37 ಯುಎನ್‌ಇ 2009 ದಿನಾಂಕ. 24.12.2009 ರ**

**ಕಂಡಿಕೆ ಸಂಖ್ಯೆ.07 ರ ಉಪ ಕಂಡಿಕೆ (viii) & (ix) ರಲ್ಲಿ ಈ ಕೆಳಗಿನಂತೆ ಹೇಳಲಾಗಿರುತ್ತದೆ.**

**7. General:**

**(viii)** As from 11-07-2009 the teaching staffs who have not acquired the qualification prescribed by the UGC are not entitled for availing the benefit of UGC revised scheme unless they acquire NET/SLET/Ph.D. through course work and that no M.Phil shall be recognized thereafter until then they shall continue to be in the pre-revised UGC scale or in the State pay scale, as the case may be.

**(ix)** In respect of fresh recruitment made after 11-07-2009 through Public Service Commission validly constituted Selection Committees, Boards of Appointment for Universities, teachers who do not possess NET/SLET/Ph.D through course work, shall be on probation for a period of two years and shall acquire NET/SLET/Ph.D through course work for declaration of the period of probation and that they will continue to draw salary in the existing scale of pay only, viz. Rs.8,000-13,500. Failure to acquire NET/SLET/Ph.D through course work will debar them from continuing in the service after the period of probation.

ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 29.12.2021 ರಂದು ಆಡಳಿತ ಮಂಡಳಿಯು ಮೇಲಿನಂತೆ ನಿರ್ಣಯ ಕೈಗೊಂಡಿರುತ್ತದೆ. ಆದರೆ, ದಿನಾಂಕ: 20.01.2022 ರಂದು ಅಧ್ಯಕ್ಷರು, ಕರ್ನಾಟಕ ಯುನಿವರ್ಸಿಟಿಸ್ ಕಾನ್‌ಸ್ಟಿಟ್ಯೂಯೆಂಟ್ ಟೀಚರ್ಸ್ ಅಸೋಸಿಯೇಶನ್, ಧಾರವಾಡ ರವರು ಮನವಿ ಸಲ್ಲಿಸಿ, ಸದರ ಆಡಳಿತ ಮಂಡಳಿ ನಿರ್ಣಯವನ್ನು ಕಾರ್ಯಗತಗೊಳಿಸಬಾರದೆಂದು ಹೇಳಿರುತ್ತಾರೆ. ಹಾಗೆಯೆ ಸದರಿ ದಿನಾಂಕ: 21.01.2022 ರ ಮನವಿ ಪತ್ರವನ್ನು ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರಿಗೆ ಸಲ್ಲಿಸಿದ್ದು, ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರ ಪತ್ರ ಕ್ರಮವಾಗಿ ದಿನಾಂಕ:14.02.2022 ದಿನಾಂಕ: 19.02.2022 ರಲ್ಲಿ ಸದರಿ ಬೋಧಕ ಸಿಬ್ಬಂದಿಯವರಿಂದ ಸ್ವೀಕೃತವಾಗಿರುವ ಮೂಲ ಪತ್ರ/ ಕೋರಿಕೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಸರ್ಕಾರದ ಹಂತದಲ್ಲಿ ಕ್ರಮವಾಗಬೇಕಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿರುತ್ತಾರೆ. ಸದರಿ ಮನವಿಯನ್ನು ಪರಿಶೀಲಿಸಲಾಗಿ, ಶ್ರೀ.ಗುರುನಾಥ ಎಂಬುವವರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯ ನೀಡಿದ ದಿನಾಂಕ 11.12.2019 ರ ತೀರ್ಪು ಹಾಗೂ 2016 ರ ಯುಜಿಸಿ ಪತ್ರದಲ್ಲಿನ ಅಂಶಗಳನ್ವಯ ಯುಜಿಸಿ ನಿಯಮಾವಳಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆಯೆಂದು ಹೇಳುತ್ತ ಎಮ್.ಫಿಲ್ ಆಧಾರದ ಮೇಲೆ ನೇಮಕಾತಿ ಮುಂದುವರೆಸುವ ಅಂಶದ ಬಗ್ಗೆ ಒತ್ತು ನೀಡಲಾಗಿದೆ ಹೊರತು ನೆಟ್/ಸ್ಲೆಟ್/ಪಿ.ಎಚ್.ಡಿ ಇಲ್ಲದಿದ್ದಾಗ್ಯೂ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದುವರೆಸಲು ಇರುವ ನಿಯಮಾವಳಿಗಳ ಬಗ್ಗೆ ಪ್ರಸ್ತಾಪ ಮಾಡಿರುವುದಿಲ್ಲ. ಮುಂದುವರೆದು, ದಿನಾಂಕ: 29.12.2021 ರಂದು ಆಡಳಿತ ಮಂಡಳಿ ಕೈಗೊಂಡ ನಿರ್ಣಯವನ್ನು ಕಾರ್ಯಗತಗೊಳಿಸುವುದಕ್ಕೆ ಈ ಕೆಳಕಂಡ ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗಿದ್ದು, ಅವುಗಳ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ.

1) ದಿನಾಂಕ: 27.09.2008 ರಂದು ನೇಮಕಾತಿಗಾಗಿ ಹೊರಡಿಸಿದ ಅಧಿಸೂಚನೆಯನ್ನು 2000 ರ ಯುಜಿಸಿ ರೆಗ್ಯುಲೇಶನ್‌ದ ವಿನಿಮಯಗಳ ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಸದರ 2000 ದ ಯುಜಿಸಿ ರೆಗ್ಯೂಲೆಶನ್ ದಲ್ಲಿ ಉಪನ್ಯಾಸಕ ಹುದ್ದೆ ಎಂದಿದ್ದು, ಅದರ ಪ್ರಕಾರವಾಗಿ ಅಧಿಸೂಚನೆ ಕೂಡ **ಉಪನ್ಯಾಸಕ ಹುದ್ದೆಯನ್ನು 1996 ರ ವೇತನ ಶ್ರೇಣಿ ರೂ.8000–275–13500 ಗಳ ವೇತನ ಶ್ರೇಣಿಯಲ್ಲಿ** ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ, ಇವರನ್ನು ಉಪನ್ಯಾಸಕ ಹುದ್ದೆಗೆ ನೇಮಕ ಮಾಡುವ ಬದಲಾಗಿ, ನೇಮಕಾತಿ ಮಾಡಿ ಆದೇಶ ನೀಡುವ ಸಂದರ್ಭದಲ್ಲಿ ದಿನಾಂಕ: 24.12.2009 ರ ಸರ್ಕಾರದ ಆದೇಶದ ಮೂಲಕ ಜಾರಿಗೆ ಬಂದಿದ್ದ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿ

ಕುಲಸಚಿವರು

ಕುಲಪತಿಗಳು

ಅಡಿಯಲ್ಲಿರುವಂತ **ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕ ಮಾಡಿ ಅದಕ್ಕೆ ಸಂಬಂಧಿತ ರೂ.15600–39100+ಎಜಿಪಿ.6000 ರ ವೇತನ ಶ್ರೇಣಿಯಲ್ಲಿ ರೂ.21,600/– ಗಳಿಗೆ** ವೇತನ ನಿಗದಿಪಡಿಸಿ ನೇಮಕಾತಿ ಆದೇಶವನ್ನು ನೀಡಲಾಗಿದೆ. ಹೀಗಾಗಿ, ಈಗಾಗಲೇ ವಿಸ್ತರಿಸಿದ 2006 ರ ವೇತನ ಶ್ರೇಣಿಯನ್ನು ಹಿಂಪಡೆದಾದಲ್ಲಿ, ಅವರನ್ನು ಉಪನ್ಯಾಸಕರೆಂದು ಪದನಾಮೀಕರಿಸಬೇಕೆ? ಅಥವಾ ಸಹಾಯಕ ಪ್ರಾಧ್ಯಾಪಕರೆಂದು ಪದನಾಮೀಕರಿಸಬೇಕೆ?

2) 2008–09 ರ ಅವಧಿಯಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಿದ್ದರ ಪ್ರಕಾರವಾಗಿ ಆಯ್ಕೆ ಪ್ರಕ್ರಿಯೆಯು ದಿನಾಂಕ: 11.07.2009 ಕ್ಕಿಂತ ಮುಂಚೆಯೆ ಸಂಪೂರ್ಣಗೊಂಡಿದ್ದು, ಸದರ ನೇಮಕಾತಿ ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ದಾಖಲಾದ **ರಿಟ್ 60507/2009 ರ ಅರ್ಜಿಯು ತಡವಾಗಿ 2011 ರಲ್ಲಿ ವಿಲೇವಾರಿಯಾಗಿದ್ದ** ಹಿನ್ನಲೆಯಿಂದಾಗಿ 2011–2012 ರ ಅವಧಿಯಲ್ಲಿ ನೇಮಕಾತಿ ಆದೇಶಗಳನ್ನು ಜಾರಿ ಮಾಡಲಾಗಿರುತ್ತದೆ. ಹಾಗಾಗಿ ಈ ಸಿಬ್ಬಂದಿಗಳನ್ನು 11.07.2009 ಕ್ಕಿಂತ ಮೊದಲೇ ನೇಮಕಗೊಂಡಿರುವವರೆಂದು ಪರಿಗಣಿಸಬೇಕೆ? ಅಥವಾ 11.07.2009 ರ ನಂತರ ನೇಮಕಗೊಂಡಿರುವವರೆಂದು ಪರಿಗಣಿಸಬೇಕೆ?

3) ಒಂದು ವೇಳೆ 11.07.2009 ಕ್ಕಿಂತ ಮೊದಲೆ ನೇಮಕಗೊಂಡವರೆಂದು ಪರಿಗಣಿಸಿದ್ದಾದರೆ, ಯಾವ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಬೇಕು? ಅಂದರೆ, ದಿನಾಂಕ: 24.12.2009 ರ ಸರ್ಕಾರದ ಆದೇಶದ ಕಂಡಿಕೆ ಸಂಖ್ಯೆ.7 ರ ಉಪಕಂಡಿಕೆ ಸಂಖ್ಯೆ.8 ರ ಪ್ರಕಾರ 11.07.2009 ಕ್ಕಿಂತ ಮೊದಲೇ ನೇಮಕಗೊಂಡಿದ್ದಲ್ಲಿ ನೆಟ್/ಸೆಟ್/ಪಿಎಚ್.ಡಿ ಹೊಂದುವವರೆಗೆ ಪರಿಷ್ಕರಣಾ ಪೂರ್ವ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗದಿಪಡಿಸಬೇಕೆಂದಿದ್ದು, ಆ ಪ್ರಕಾರವಾಗಿ ನಿಗದಿಪಡಿಸಬೇಕೆ?

4) ಈ ಮೇಲಿನಂತೆ ಕ್ರಮಕೈಗೊಂಡಿದ್ದಾದಲ್ಲಿ, ಸದರ 4 ಜನ ಸಿಬ್ಬಂದಿಗಳು ಈಗಾಗಲೇ 2010 ರ ಯುಜಿಸಿ ರೆಗ್ಯುಲೇಶನ್‌ಗಳ ಪ್ರಕಾರ **ಸಹಾಯಕ ಪ್ರಾಧ್ಯಾಪಕ (6000 ಎಜಿಪಿ)** ದಿಂದ **ಸಹಾಯಕ ಪ್ರಾಧ್ಯಾಪಕ (7000 ಎಜಿಪಿ)** ಗೆ ಪದೋನ್ನತಿಗೊಂಡಿರುವುದರಿಂದ, ಈಗಾಗಲೇ ನೀಡಿದ ಈ ಪದೋನ್ನತಿಗಳನ್ನು ಯಾವ ರೀತಿ ಮರುನಿಗದಿಪಡಿಸಬೇಕು?

5) ಹಾಗೆಯೇ, ಸದರ 4 ಜನ ಸಿಬ್ಬಂದಿಗಳ ವೇತನವನ್ನು ಮರುನಿಗದಿಪಡಿಸುವುದರಿಂದ ಉಂಟಾಗುವ ವೇತನ ವ್ಯತ್ಯಾಸದ ಮೊತ್ತವನ್ನು ವಸೂಲಿಸುವ ಬಗ್ಗೆ ಯಾವ ರೀತಿ ಅಂದರೆ ಕಂತುಗಳಲ್ಲಿ/ಸಮಾನ ಕಂತುಗಳಲ್ಲಿ ವಸೂಲಾತಿಗೆ ಕ್ರಮವಹಿಸಬೇಕು?

ಬೋಧಕ ಸಿಬ್ಬಂದಿಗಳಾದ **ಶ್ರೀಮತಿ. ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ). ಗೀತಾ.ಎಸ್.ಚವ್ಹಾಣ, ಶ್ರೀಮತಿ. ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ** ಇವರು ತಮ್ಮ ಪತ್ರ ದಿನಾಂಕ: 31.03.2022 ರ ಜೊತೆಗೆ ಲಗತ್ತಿಸಿದ ಧಾರವಾಡದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 14.02.2022 ರಲ್ಲಿ ನೀಡಿದ ತೀರ್ಪಿನ (WRIT PETITION No. 100610 of 2022 (S-RES) ರಲ್ಲಿ ಮಧ್ಯಂತರ ತಡೆಯಾಜ್ಞೆಯ ಆದೇಶ ಈ ಕೆಳಗಿನಂತೆ ಇರುತ್ತದೆ.

**ORDER**

**" The learned counsel Shri. K. L. Patil is directed to accept notice for respondents.**

**Office objections regarding furnishing of typed copy of Annexures- AA,**

**AC, AD is dispensed with.**

**Interim stay of Annexure- Ah till the next date of hearing.**

**List this writ petition for Preliminary Hearing."**

ಆದುದರಿಂದ, ಎಮ್.ಫಿಲ್ ಪದವಿಯ ಆಧಾರದ ಮೇಲೆ ನೇಮಕಗೊಂಡ ನೆಟ್/ಸ್ಲೆಟ್/ಪಿಹೆಚ್‌ಡಿ ವಿದ್ಯಾರ್ಹತೆಯನ್ನು ಹೊಂದದೆ ಇರುವ ನಾಲ್ಕು ಜನ ಬೋಧಕ ಸಿಬ್ಬಂದಿಗಳಾದ **ಶ್ರೀಮತಿ.ಜ್ಯೋತಿ.ಎಸ್.ದೊಡ್ಡಮನಿ, ಡಾ.(ಶ್ರೀಮತಿ).ಗೀತಾ.ಎಸ್.ಚವ್ಹಾಣ, ಶ್ರೀಮತಿ.ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ** ಇವರುಗಳ ಪ್ರಕರಣದಲ್ಲಿ ಮುಂದಿನ ಕ್ರಮಜರುಗಿಸುವುದಕ್ಕೆ ಎದುರಾದ ಈ ಮೇಲ್ಕಂಡ ತಾಂತ್ರಿಕ ಸಮಸ್ಯೆಗಳ ಬಗ್ಗೆ ನಿರ್ಧಾರ ಕೈಗೊಳ್ಳುವ ಸಂಬಂಧ ಹಾಗೂ ಸದರ 4 ಜನ ಬೋಧಕ ಸಿಬ್ಬಂದಿಯವರು ತಮ್ಮ ಪತ್ರ ದಿನಾಂಕ: 31.03.2022 ರ ಜೊತೆಗೆ ಲಗತ್ತಿಸಿದ ಧಾರವಾಡದ

ಕುಲಸಚಿವರು

ಕುಲಪತಿಗಳು

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 14.02.2022 ರಂದು (WRIT PETITION No. 100610 of 2022 (S-RES) ನೀಡಿದ ಮಧ್ಯಂತರ ತಡೆಯಾಜ್ಞೆಯ ಆದೇಶವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆ ಹಾಗೂ ಅವಗಾಹನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆ ಹಿನ್ನೆಲೆಯಲ್ಲಿ, ಯುಜಿಸಿ ನಿಗದಿಪಡಿಸಿದ ನೆಟ್/ಸೆಟ್/ಪಿಎಚ್.ಡಿ. ವಿದ್ಯಾರ್ಹತೆಯನ್ನು ಹೊಂದದಿರುವ 04 ಜನ ಬೋಧಕ ಸಿಬ್ಬಂದಿಗಳ ಪ್ರಕರಣದಲ್ಲಿ ಮುಂದಿನ ಕ್ರಮಜರುಗಿಸುವುದಕ್ಕೆ ಎದುರಾದ ತಾಂತ್ರಿಕ ಸಮಸ್ಯೆಗಳ ಬಗ್ಗೆ ಹಾಗೂ ಬೋಧಕ ಸಿಬ್ಬಂದಿಗಳಾದ ಶ್ರೀಮತಿ. ಜ್ಯೋತಿ. ಎಸ್. ದೊಡ್ಡಮನಿ, ಡಾ.(ಶ್ರೀಮತಿ). ಗೀತಾ. ಎಸ್. ಚವ್ಹಾಣ, ಶ್ರೀಮತಿ. ನಿರೂಪಮಾ. ಜೆ.ಎಮ್., ಶ್ರೀ.ಎಚ್.ಡಿ.ನೀಲಗುಂದ ಇವರು ತಮ್ಮ ಪತ್ರ ದಿನಾಂಕ 31.03.2022 ರ ಜೊತೆಗೆ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ, ಧಾರವಾಡದಲ್ಲಿ ದಾಖಲಿಸಿದ W.P.No. 100610 of 2022 S-RES ರಲ್ಲಿ ಆಡಳಿತ ಮಂಡಳಿ ಠರಾವು ಸಂಖ್ಯೆ 10 ದಿನಾಂಕ 29.12.2021ರ (KU-Syndicate/Proceedings-15/2021-2022/A-33 ದಿನಾಂಕ 04.01.2022)ರ ನಿರ್ಣಯಕ್ಕೆ ತಂದ ತಡೆಯಾಜ್ಞೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಪ್ರಸ್ತುತ ಮೇಲ್ಕಾಣಿಸಿದ ಆಡಳಿತ ಮಂಡಳಿಯ ನಿರ್ಣಯಕ್ಕೆ ಕಾರ್ಯಗತಗೊಳಿಸದೇ ಸ್ಥಗಿತದಲ್ಲಿರಿಸಲು ಮತ್ತು ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಹಿಸಬೇಕೆಂದು ತೀರ್ಮಾನಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–05: ವಿಷಯ–:** ಶ್ರೀಮತಿ ಇಂದುಮತಿ ವ್ಹಿ. ಜೋಶಿ, ಕಿರಿಯ ಸಹಾಯಕರು, ವಿದ್ಯಾಮಂಡಳ (ಪಿ.ಜಿ./ಪಿಎಚ್.ಡಿ.) ವಿಭಾಗ, ಕ.ವಿ.ವಿ. ಧಾರವಾಡ ಇವರು ದಿನಾಂಕ: 19.05.2022 ರಿಂದ ಅನ್ವಯವಾಗುವಂತೆ ಸೇವೆಗೆ ರಾಜೀನಾಮೆ ಸಲ್ಲಿಸಿರುವ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಪರಿಶೀಲಿಸುವ ಕುರಿತು.

ಪ್ರಸ್ತಾವನೆ :

ಶ್ರೀಮತಿ ಇಂದುಮತಿ ವ್ಹಿ. ಜೋಶಿ, ಕಿರಿಯ ಸಹಾಯಕರು, ವಿದ್ಯಾಮಂಡಳ (ಪಿ.ಜಿ./ಪಿಎಚ್.ಡಿ.) ವಿಭಾಗ, ಕ.ವಿ.ವಿ. ಧಾರವಾಡ ಇವರು ಪತ್ರ ದಿನಾಂಕ: 23.11.2021 ರ ಮೂಲಕ, ದಿನಾಂಕ: 17.10.2018 ರಂದು ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ಸಿ.ಆ.ಸು. ವಿಭಾಗದಲ್ಲಿ ನೇಮಕಾತಿ ಹೊಂದಿ (No.8056) ದಿನಾಂಕ: 07.11.2018 ರಿಂದ ವಿದ್ಯಾಮಂಡಳ (ಪಿ.ಜಿ./ಪಿಎಚ್.ಡಿ.) ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈಗ ಅವರು ತಮ್ಮ ಕೆಲವು ವೈಯಕ್ತಿಕ ಕಾರಣಗಳಿಂದ ಹಾಗೂ ಆರೋಗ್ಯದ ತೊಂದರೆಯಿಂದ ಸದರಿಯವರು ತಮ್ಮ ಕರ್ತವ್ಯಕ್ಕೆ ರಾಜೀನಾಮೆ ಸಲ್ಲಿಸಿದ್ದು, ಸದರ ರಾಜೀನಾಮೆಯನ್ನು ಅಂಗೀಕರಿಸಲು ವಿನಂತಿಸಿರುತ್ತಾರೆ.

ಮುಂದುವರೆದು, ಸದರಿಯವರು ದಿನಾಂಕ: 31.11.2021 ರ ಮೂಲಕ ಸೇವೆಗೆ ಸಲ್ಲಿಸಿರುವ ರಾಜೀನಾಮೆ ವಿಷಯವನ್ನು ಪರಿಶೀಲಿಸುವ ಕುರಿತು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಸದರ ಸಿಂಡಿಕೇಟ್ ಸಭೆಯ ಪರಿಶೀಲನೆಯ ಹಂತದಲ್ಲಿರುವಾಗಲೇ ಸದರಿಯವರು ಮತ್ತೊಮ್ಮೆ ದಿನಾಂಕ: 17.05.2022 ರ ಪತ್ರದ ಮೂಲಕ, ಕಿರಿಯ ಸಹಾಯಕ ಹುದ್ದೆಗೆ ರಾಜೀನಾಮೆ ಪತ್ರ ಸಲ್ಲಿಸಿರುತ್ತಾರೆ. ಕೆಲವು ಅನಿವಾರ್ಯ ಕಾರಣಗಳಿಂದ ಇನ್ನು ಮುಂದೆ ಕಚೇರಿ ಕೆಲಸಕ್ಕೆ ಹಾಜರಾಗುವಲ್ಲಿ ತೊಂದರೆಯಾಗುತ್ತಿರುವುದರಿಂದ ದಿನಾಂಕ: 19.05.2022 ರಿಂದ ಕಚೇರಿ ಕೆಲಸಕ್ಕೆ ಹಾಜರಾಗುವುದಿಲ್ಲ ವಾದ್ದರಿಂದ ಸದರಿ ದಿನಾಂಕದಿಂದಲೇ ರಾಜೀನಾಮೆಯನ್ನು ಅಂಗೀಕರಿಸಿ ಕೆಲಸದಿಂದ ಬಿಡುಗಡೆ ಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸದರ ವಿಷಯದ ಕುರಿತು ಕೆ.ಸಿ.ಎಸ್.ಆರ್. 252 (ಸಿ) ಈ ಕೆಳಗಿನಂತೆ ಇರುತ್ತದೆ.

**Procedure to be followed in accepting resignation:**

A Government servant intending to resign from the post held by him should give a notice of his intention to resign at least a month in advance indicating the date from which he intends to resign. The Competent Authority may accept a notice of less than a month if there are circumstances warranting such acceptance. A resignation becomes effective when it is accepted and the concerned Government servant is relieved of his duties. It is, therefore, necessary to see that handing over charge, recovery of dues if any from the Government servant and such other formalities are completed before the Government servant is relieved of his duties. Where however, a Government servant tenders resignation during his unauthorized absence or leave the resignation may be accepted from the date he remained unauthorized absent or from the expiry of leave sanctioned to him, as the case may be. In such an event, the question of relieving the Government servant of his duties does not arise and the resignation becomes effective on its acceptance by the Competent Authority.

ಸದರಿಯವರ ರಾಜೀನಾಮೆ ಕುರಿತಂತೆ ಸಂಬಂಧಿಸಿದ ವಿಭಾಗಗಳಿಂದ ಬಾಕಿ ರಹಿತ ಪ್ರಮಾಣ ಪತ್ರವನ್ನು ಸಹ ಪಡೆಯಬೇಕಾಗುತ್ತದೆ ಹಾಗೂ ವಿಶ್ವವಿದ್ಯಾಲಯದಿಂದ ಬರತಕ್ಕ ಎಲ್ಲ ಹಣಕಾಸಿನ ಸೌಲಭ್ಯಗಳನ್ನು ಸದರಿಯವರಿಗೆ ಸಂದಾಯ ಮಾಡಲಾಗುವುದು.

ಕುಲಸಚಿವರು

ಕುಲಪತಿಗಳು

ಆದ್ದರಿಂದ, ಶ್ರೀಮತಿ ಇಂದುಮತಿ ವ್ಹಿ. ಜೋಶಿ, ಕಿರಿಯ ಸಹಾಯಕರು, ವಿದ್ಯಾಮಂಡಳ (ಪಿ.ಜಿ./ಪಿಎಚ್.ಡಿ.) ವಿಭಾಗ, ಕ.ವಿ.ವಿ. ಧಾರವಾಡ ಇವರು ದಿನಾಂಕ: 19.05.2022 ರಿಂದ ಅನ್ವಯವಾಗುವಂತೆ ಸಲ್ಲಿಸಿರುವ ರಾಜೀನಾಮೆ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಶ್ರೀಮತಿ. ಇಂದುಮತಿ ವ್ಹಿ. ಜೋಶಿ, ಕಿರಿಯ ಸಹಾಯಕರು, ವಿದ್ಯಾಮಂಡಳ (ಪಿ.ಜಿ./ಪಿಎಚ್.ಡಿ.) ವಿಭಾಗ, ಕ.ವಿ.ವಿ. ಧಾರವಾಡ ಇವರು ದಿನಾಂಕ 19.05.2022 ರಿಂದ ಅನ್ವಯವಾಗುವಂತೆ ಸೇವೆಗೆ ರಾಜೀನಾಮೆ ಸಲ್ಲಿಸಿರುವ ವಿಷಯವನ್ನು ಆಡಳಿತ ಮಂಡಳಿಯು ರಾಜೀನಾಮೆಯನ್ನು ಅಂಗೀಕರಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–06: ವಿಷಯ–**: ಶ್ರೀ ಕುಮಾರ ಬಿ. ಕುರುಬರ ಇವರನ್ನು ಅನುಕಂಪದ ಆಧಾರದ ಮೇಲೆ ಸಿಪಾಯಿ ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು.

**ಪ್ರಸ್ತಾವನೆ :**

ಶ್ರೀ ಕುಮಾರ ಬಿ. ಕುರುಬರ ಇವರ ತಂದೆಯಾದ ದಿವಂಗತ ಶ್ರೀ ಭೀಮಪ್ಪ ಕೆ. ಕುರುಬರ ಇವರು ಸಿ.ಆ.ಸು. ವಿಭಾಗ, ಕವಿವಿ, ಧಾರವಾಡ ಇಲ್ಲಿ ಜಾಡಮಾಲಿ ಎಂದು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದಿನಾಂಕ 26.10.2010 ರಂದು ನಿಧನರಾಗಿರುವುದರಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ದಿನಾಂಕ 25.03.2011 ರಂದು ಮನವಿಯನ್ನು ಸಲ್ಲಿಸಿರುತ್ತಾರೆ. ದಿವಂಗತ ಶ್ರೀ ಭೀಮಪ್ಪ ಕೆ. ಕುರುಬರ ಇವರಿಗೆ ಇಬ್ಬರೂ ಪತ್ನಿಯರು ಇದ್ದ ಕಾರಣ, ಇಬ್ಬರೂ ಪತ್ನಿಯರು ಅವರ ಪತಿಯ ಮರಣೋತ್ತರ ಸೌಲಭ್ಯಗಳನ್ನು ತಮಗೆ ನೀಡಬೇಕೆಂದು ವಿನಂತಿಸಿಕೊಂಡ ಪ್ರಯುಕ್ತ ಇಬ್ಬರೂ ಅರ್ಜಿದಾರರಿಗೆ ವಾರಸುದಾರರ ಘೋಷಣೆ ಕುರಿತು ಸಕ್ಷಮ ಪ್ರಾಧಿಕಾರವಾದ ಮಾನ್ಯ ನ್ಯಾಲಯದಿಂದ ಡಿಕ್ರಿ ಪಡೆದುಕೊಂಡು ಸಲ್ಲಿಸಲು ತಿಳಿಸಲಾಗಿತ್ತು. ಅದರಂತೆ ಅರ್ಜಿದಾರರು ಮಾನ್ಯ ನ್ಯಾಯಾಲಯದ ಮೊರೆಹೋಗಿದ್ದು ಲೋಕ ಅದಾಲತ್ 3 ನೇ ಅಧಿಕ ದಿವಾನ್ ನ್ಯಾಯಾಲಯ ಸಿವಿಲ್ ಜಡ್ಜ್ & ಜೆ.ಎಮ್.ಎಫ್.ಸಿ.(ಕಿರಿಯ ವಿಭಾಗ) ಧಾರವಾಡ ಡಿಕ್ರಿ ಅಸಲ್ ದಾವೆ ಸಂಖ್ಯೆ. 351/2021 ರ ದಿನಾಂಕ: 28.08.2021 ರಲ್ಲಿ ಧಾರವಾಡ ಇವರ ನ್ಯಾಯಾಲಯದಲ್ಲಿ ರಾಜಿ ಅರ್ಜಿ ಆದೇಶ ಸಂಖ್ಯೆ. 23 ನಿಯಮ 3 ಸಿ.ಪಿ.ಸಿ. ನೇದ್ದರ ಅಡಿಯಲ್ಲಿ ವಾದಿಯರು, ಪ್ರತಿವಾದಿಯರು ಇವರು ಸಲ್ಲಿಸಿದ ರಾಜಿ ಪತ್ರದ ವಿವರ ಈ ಕೆಳಗಿನಂತೆ ಕರಾರುಗಳು ಇರುತ್ತದೆ.

**ವಾದಿ**

1) ಶ್ರೀಮತಿ ಮಹಾದೇವಿ ಕೋಂ. ಬಿ. ಕುರುಬರ
2) ಶ್ರೀ ಕುಮಾರ ಭೀಮಪ್ಪ ಕುರುಬರ
3) ಶ್ರೀಮತಿ ರೇಣುಕಾ ಅಣ್ಣಪ್ಪ ಜಿರೀಗಿವಾಡ

**ಪ್ರತಿವಾದಿ**

1) ಶ್ರೀಮತಿ ಕರೆವ್ವ ಕೋಂ. ಭೀಮಪ್ಪ ಕುರುಬರ

**ಕರಾರುಗಳು :**

1) ಪ್ರತಿವಾದಿ ನಂ. 1 ನೇದವರು ಈ ಮೂಲಕ, ಒಪ್ಪಿಕೊಳ್ಳುವುದೇನೆಂದರೆ ವಾದಿ ನಂ. 1 ನೇಯವರು ಮೃತ ಶ್ರೀ ಭೀಮಪ್ಪ ತಂದೆ ಕರೆಪ್ಪ ಕುರುಬರ ರವರ ಕಾನೂನುಬದ್ಧ ಒಂದನೇಯ ಪತ್ನಿಯಾಗಿದ್ದು, ಹಾಗೂ ವಾದಿ ನಂ.2 ಮತ್ತು 3 ನೇದವರು ಸದರಿಯವರ ಮಕ್ಕಳಾಗಿರುತ್ತಾರೆ. ಅದೇ ರೀತಿ ವಾದಿಯರು ಒಪ್ಪಿಕೊಳ್ಳುವುದೇನೆಂದರೆ ಪ್ರತಿವಾದಿ ನಂ. 1 ನೇದವರು ಮೃತ ಶ್ರೀ ಭೀಮಪ್ಪ ತಂದೆ ಕರೆಪ್ಪ ಕುರುಬರ ಇವರ ಎರಡನೇಯ ಪತ್ನಿ ಎಂದು ಒಪ್ಪಿಕೊಂಡಿರುತ್ತಾರೆ.

2) ಅದೇ ರೀತಿ ವಾದಿ ನಂ. 1 ನೇದವರು ಮತ್ತು ಪ್ರತಿವಾದಿ ನಂ. 1 ನೇದವರು ಸದರಿ ಮೃತ ಶ್ರೀ ಭೀಮಪ್ಪ ತಂದೆ ಕರೆಪ್ಪ ಕುರುಬರ ಅವರ ಮರಣಾನಂತರ ಅವರ ಸೇವಾ ಸೌಲಭ್ಯಗಳೆಲ್ಲ ಬರಬೇಕಾಗಿರುವ ಹಣವನ್ನು ಸದರಿಯವರು ಸಮವಾಗಿ ಪಡೆದುಕೊಳ್ಳಲು ಒಪ್ಪಿಕೊಂಡಿರುತ್ತಾರೆ.

3) ಸದರಿ ವಾದಿ ನಂ. 2 ನೇದವರಿಗೆ ಮೃತ ಶ್ರೀ ಭೀಮಪ್ಪ ತಂದೆ ಕರೆಪ್ಪ ಕುರುಬರ ಅವರ ಅನುಕಂಪದ ಆಧಾರದ ಮೇಲೆ ಬರತಕ್ಕಂತಹ ನೌಕರಿಯನ್ನು ಪಡೆಯಲು ವಾದಿ ನಂ. 1 ಮತ್ತು 3 ಹಾಗೂ ಪ್ರತಿವಾದಿ ನಂ. 1 ತಮ್ಮ ಯಾವುದೇ ರೀತಿಯ ತಕರಾರು ಇರುವುದಿಲ್ಲ ಎಂದು ಒಪ್ಪಿಕೊಂಡಿದ್ದು ಇರುತ್ತದೆ.

4) ಅದೇ ರೀತಿಯಾಗಿ ಪ್ರತಿವಾದಿ ನಂ. 1 ನೇದವರಿಗೆ ರೂಪಾಯಿ 2,00,000/- ಗಳನ್ನು ಈಗಾಗಲೇ ವಾದಿ ನಂ. 1 ಮತ್ತು 2 ನೇದವರು ನೀಡಿದ್ದು, ಅದನ್ನು ಪ್ರತಿವಾದಿ ನಂ. 1 ನೇದವರು ಪಡೆದುಕೊಂಡಿದ್ದು ಇರುತ್ತದೆ.

5) ಅದೇ ರೀತಿಯಾಗಿ ಮೃತ ಭೀಮಪ್ಪ ತಂದೆ ಕರೆಪ್ಪ ಕುರುಬರ ಇವರ ಬರಬಹುದಾದ ಕೌಟುಂಬಿಕ ಮಾಸಿಕ ಪಿಂಚಣಿ ಹಣವನ್ನು ಪಡೆಯಲು ಬಾಧ್ಯಸ್ಥರಿದ್ದಲ್ಲಿ ಸದರಿ ಪಿಂಚಣಿ ಹಣವನ್ನು ವಾದಿ ನಂ. 1 ನೇದವರು ಪಡೆಯಲು ಹಕ್ಕುದಾರಳಾಗಿರುತ್ತಾಳೆ ಎಂದು ಪ್ರತಿವಾದಿ ನಂ. 1 ನೇದವರು ಒಪ್ಪಿಕೊಂಡಿದ್ದು ಇರುತ್ತದೆ.

6) ಸದರಿ ಈ ರಾಜಿಪತ್ರದಂತೆ ವಾದಿ ಮತ್ತು ಪ್ರತಿವಾದಿಯರು ಈ ಮೂಲಕ, ಹೇಳುವುದೇನೆಂದರೆ, ಈ ರಾಜಿ ಪತ್ರವನ್ನು ಉಭಯ ಪಕ್ಷಗಾರರು ತಮ್ಮ ಆತ್ಮ ಸಂತೋಷ ವ ಅಕ್ಕಲ್ ಹುಷಾರಿಯಿಂದ ಈ ರಾಜಿಪತ್ರದ ಕರಾರುಗಳಿಗೆ ಒಳಪಟ್ಟು ರಾಜಿ ಮಾಡಿಕೊಂಡಿದ್ದು, ಸದರೀ ರಾಜಿ ಪತ್ರವು ಯಾವುದೇ ರೀತಿಯ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿರುವುದಿಲ್ಲ.

7) ಸದರಿ ರಾಜಿಪತ್ರದ ಅಂಶಗಳನ್ನು ಪ್ರತಿವಾದಿ ನಂ. 2 ನೇದವರು ನೋಡಿ ತಿಳಿದುಕೊಂಡು ಸರಿ ಇದೆ ಅಂತಾ ಒಪ್ಪಿಕೊಂಡಿದ್ದು ಇರುತ್ತದೆ.

ಕುಲಸಚಿವರು

ಕುಲಪತಿಗಳು

8) ಇದರಲ್ಲಿ ನಾವು ವಾದಿ ಮತ್ತು ಪ್ರತಿವಾದಿಯರು ಸದರಿ ರಾಜೀ ಪತ್ರದ ಎಲ್ಲ ವಾಕ್ಯವೃಂದಗಳಲ್ಲಿ ವಿವರಿಸಿದ ಸಂಗತಿಗಳು ಸ್ವತಃ ನಾವೇ ಹೇಳಿ ಬರೆಯಿಸಿದವುಗಳು ಇದ್ದು ಅವುಗಳನ್ನು ಓದಿ ತಿಳಿದುಕೊಂಡು ಎಲ್ಲವೂ ದೇವರ ಸಾಕ್ಷಿಯಾಗಿ ಸರಿ ಹಾಗೂ ಸತ್ಯವಾಗಿರುತ್ತವೆ ಅಂತಾ ಒಪ್ಪಿಕೊಂಡು ಪ್ರಮಾಣಿಕರಿಸುತ್ತ ನಾವು ನಮ್ಮ ಸಹಿ ಮಾಡಿದ್ದು ಇರುತ್ತದೆ.

ದಿವಂಗತ ಶ್ರೀ ಬಿ. ಕೆ. ಕುರುಬರ ಇವರು ದಿನಾಂಕ 01.07.1984 ರ ನಂತರ ವಿಶ್ವವಿದ್ಯಾಲಯದ ಸೇವೆಗೆ ತಾತ್ಕಾಲಿಕ/ದಿನಗೂಲಿ/ ಎಂ.ಆರ್.ಇ./ ಎನ್.ಎಂ.ಆರ್/ತುಂಡು ಗುತ್ತಿಗೆ/ಕೈ ರಸೀದಿ ಇತ್ಯಾದಿ ಮೇಲೆ ಸೇರಿ ಸೇವೆ ಸಲ್ಲಿಸುತ್ತಿದ್ದ 64 ಜನ ಸಿಬ್ಬಂದಿಗಳನ್ನು ದಿನಾಂಕ 07.09.2007, 08.09.2007 ಹಾಗೂ 05.12.2008 ರ ಮೂಲಕ ಸಕ್ರಮಾತಿಗೊಳಿಸಲಾಗಿದ್ದು, ಸದರ ಸಕ್ರಮಾತಿಗೊಳಿಸಿದ ಸಿಬ್ಬಂದಿಗಳನ್ನು ನ್ಯಾಯಾಲಯದ ಆದೇಶ ಮತ್ತು ಸರ್ಕಾರದ ನಿರ್ದೇಶನದಂತೆ ದಿನಾಂಕ 04.05.2017 ರಂದು ಸೇವಾ ದೃಢೀಕರಣಗೊಳಿಸಲಾದ ಪ್ರಕರಣದಲ್ಲಿ ಅರ್ಜಿದಾರರ ತಂದೆಯಾದ ದಿವಂಗತ ಶ್ರೀ ಬಿ. ಕೆ. ಕುರುಬರ ಇವರು ನೇಮಕಾತಿ ಹೊಂದಿದವರಾಗಿರುತ್ತಾರೆ.

ಅನುಕಂಪದ ಆಧಾರದ ಮೇಲೆ ನೇಮಕಾತಿ ಅನುಶಾಸನ (vide Notification No. S&S/4555 dated: 23.01.1982) ಪ್ರಕಾರ ಈ ಸಂಬಂಧವಾಗಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಶರತ್ತುಗಳಿಗೆ ಅನುಗುಣವಾಗಿ ಅರ್ಹತೆಯನ್ನು ಹೊಂದಿರಬೇಕಾಗಿರುತ್ತದೆ.

ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ದಿನಾಂಕ: 12.09.1996 ರ ಸರ್ಕಾರದ ಅಧಿಸೂಚನೆ ನಂ. ಡಿಪಿಎಆರ್/100/ಎಸ್‌ಸಿಎ/95 ರ ಮೂಲಕ ಕೆ.ಸಿ.ಎಸ್. (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಹಾಗೂ ತತ್ಸಂಬಂಧಿತ ತಿದ್ದುಪಡಿ ನಿಯಮಗಳು/ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.

***3) Eligibility for Appointment:***

(1) Appointment on compassionate grounds under these rules shall not be claimed as a matter of right and shall not be given as a matter of course.

(2) Appointment under these rules shall be restricted to the dependent of a deceased Government Servant in the following order of preference, namely:

[2][(i) in the case of the deceased male Government Servant:

(a) the widow;

(b) a son, if widow is not eligble or for any valid reason she is not willing to accept the appointment;

(c) an unmarried daughter, if the widow and son are not eligible or for any valid reason they are not willing to accept the appointment.]

[1][(d) a widowed daughter, if the widow, son and unmarried daughter are not eligible or for any valid reason they are not willing to accept the appointment;]

[2][(ii) in the case of the deceased female Government Servant:

(a) a son;

(b) an unmarried daughter, if the son is not eligible or for any valid reason he is not willing to accept the appointment;

(c) the widower, if the son and daughter are not eligible or for any valid reason they are not willing to accept in the appointment.]

[1][(d) a widowed daughter, if the widower, son and unmarried daughter are not eligible or for any valid reason they are not willing to accept the appointment.]

( 3) An adoped daughter, if the widower, son and unmarried daughter are not eligible for appointment under these rules.

[3](4) A person against whom at the time of making application a criminal case is under investigation of trial on the charge of having committed murder of the deceased Government Servant or for abetting the commission of such offence shall not be eligible for appointment under these rules.]

ಮೇಲ್ಕಾಣಿಸಿದ 3 ರ ನಿಯಮದ ಉಪ ನಿಯಮ 2(2)(i)(a) ಪ್ರಕಾರ ನಿಧನ ಹೊಂದಿದ ಪುರುಷ ಸರ್ಕಾರಿ ನೌಕರನ ಪತ್ನಿ ಅಥವಾ ಒಂದು ವೇಳೆ ಯಾವುದೋ ಕಾರಣಕ್ಕೆ ಪತ್ನಿ ನೇಮಕಾತಿ ಬಯಸದಿದ್ದಲ್ಲಿ ಮಗನಿಗೆ, ಒಂದು ವೇಳೆ ಮಗನಿಗೆ ಅರ್ಹತೆ ಇಲ್ಲದಿದ್ದಲ್ಲಿ, ಅಥವಾ ಇನ್ನಾವುದೇ ಯುಕ್ತ ಕಾರಣಗಳಿಂದಾಗಿ ಅವನು ನೇಮಕಾತಿ ಬಯಸದಿದ್ದಲ್ಲಿ ವಿಧುರನಿಗೆ, ಒಂದು ವೇಳೆ ವಿಧುರ, ವಿವಾಹಿತ ಮಗ ಹಾಗೂ ಮಗಳಿಗೆ ಅರ್ಹತೆಯು ಇಲ್ಲದಿದ್ದಲ್ಲಿ ಅಥವಾ ಇನ್ನಾವುದೇ ಯುಕ್ತ ಕಾರಣಗಳಿಗಾಗಿ ಅವರುಗಳು ನೇಮಕಾತಿಗೆ ಬಯಸದಿದ್ದಲ್ಲಿ ವಿಧವೆ ಮಗಳಿಗೆ

ಕುಲಸಚಿವರು

ಕುಲಪತಿಗಳು

ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿ ತಿದ್ದುಪಡಿ ಆದೇಶ ದಿನಾಂಕ: 09.06.2021 ರ ಪ್ರಕಾರ ವಿವಾಹಿತ ಮಗಳನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸಲು ಅವಕಾಶದಲ್ಲಿರಿಸಬೇಕಾಗಿದೆ.

ಅರ್ಜಿದಾರರು ಉಪ ತಹಶೀಲ್ದಾರ ಧಾರವಾಡ-ಹುಬ್ಬಳ್ಳಿ ಇವರಿಂದ ಪಡೆದು ಸಲ್ಲಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ವಿವರ 3 ನೇ ಅಧಿಕ ದಿವಾನ್ ನ್ಯಾಯಾಲಯ ಸಿವಿಲ್ ಜಡ್ಜ್ & ಜೆ.ಎಮ್.ಎಫ್.ಸಿ. ಧಾರವಾಡ ಡಿಕ್ರಿ ಅಸಲ್ ದಾವೆ ಸಂಖ್ಯೆ. 351/2021 ರ ದಿನಾಂಕ: 28.08.2021 ಪ್ರಕಾರ ಮೃತ ಕುಟುಂಬದ ಜೀವಂತ ಸದಸ್ಯರ ವಿವರ ಈ ಕೆಳಗಿನಂತಿರುತ್ತದೆ.

| ಹೆಸರು | ವಯಸ್ಸು | ಮೃತರ ಜೊತೆಗೆ ಸಂಬಂಧ | ವೈವಾಹಿಕ ಸ್ಥಿತಿ |
|---|---|---|---|
| ಶ್ರೀಮತಿ ಮಹಾದೇವಿ ಕೋಂ. ಐ. ಕುರುಬರ | 42 | ಪತ್ನಿ | ವಿಧವೆ |
| ಶ್ರೀಮತಿ ಕರೆವ್ವ ಕೋಂ. ಭೀಮಪ್ಪ ಕುರುಬರ | 48 | ಪತ್ನಿ | ವಿಧವೆ |
| ಶ್ರೀಮತಿ ರೇಣುಕಾ ಅಣ್ಣಪ್ಪ ಜೀರಗವಾಡ | 23 | ಮಗಳು | ವಿವಾಹಿತೆ |
| ಶ್ರೀ ಕುಮಾರ ಭೀಮಪ್ಪ ಕುರುಬರ | 29 | ಮಗ | ಅವಿವಾಹಿತ |

ನಿಯಮ 3 ರ ಉಪನಿಯಮ 2 (2) (i)(a) ರ ಪ್ರಕಾರ ಪ್ರಸ್ತುತ ಪ್ರಕರಣದಲ್ಲಿ ದಿವಂಗತರ ಪತ್ನಿಗೆ ಅನುಕಂಪದ ಆಧಾರದ ನೇಮಕಾತಿಗೆ ಮೊದಲು ಆದ್ಯತೆ ಇರುತ್ತದೆ. ಶ್ರೀಮತಿ ಮಹಾದೇವಿ ಭೀ. ಕುರುಬರ, ಶ್ರೀಮತಿ ಕರೆವ್ವ ಭೀ. ಕುರುಬರ ಮತ್ತು ಶ್ರೀಮತಿ ರೇಣುಕಾ ಅಣ್ಣಪ್ಪ ಜೀರಗವಾಡ ಇವರುಗಳು ಶ್ರೀ ಕುಮಾರ ಭೀ. ಕುರುಬರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು 3 ನೇ ಅಧಿಕ ದಿವಾನ್ ನ್ಯಾಯಾಲಯ ಸಿವಿಲ್ ಜಡ್ಜ್ & ಜೆ.ಎಮ್.ಎಫ್.ಸಿ.(ಕಿರಿಯ ವಿಭಾಗ) ಧಾರವಾಡ ಡಿಕ್ರಿ ಅಸಲ್ ದಾವೆ ಸಂಖ್ಯೆ. 351/2021 ರ ದಿನಾಂಕ: 28.08.2021 ರ ರಾಜಿ ಪತ್ರದಲ್ಲಿ ಒಪ್ಪಿಗೆ ನೀಡಿರುತ್ತಾರೆ.

ಮೇಲೆ ಓದಲಾದ ಉಪನಿಯಮದನ್ವಯ ಹಾಗೂ ಮೇಲ್ಕಾಣಿಸಿದ ದೃಢೀಕರಣ ಪತ್ರದಂತೆ ಮೃತರ ಮಗನಾದ ಹಾಗೂ ಅರ್ಜಿದಾರರಾದ ಶ್ರೀ ಕುಮಾರ ಭೀಮಪ್ಪ ಕುರುಬರ ಇವರು ನೇಮಕಾತಿಗೆ ಅರ್ಹರಿರುವುದನ್ನು ಪರಿಶೀಲಿಸಬಹುದಾಗಿದೆ.

ತಿದ್ದುಪಡಿಯಾದ ಸರ್ಕಾರದ ಆದೇಶ ಸಂಖ್ಯೆ. ಸಿ.ಆ.ಸು.ಇ. 26 ಸೇಅನೇ 2018 ದಿನಾಂಕ: 9-04-2021 ರ ಪ್ರಕಾರ ಮೃತ ಸರ್ಕಾರಿ ನೌಕರನ ಕುಟುಂಬ ಆರ್ಥಿಕ ಅಡಚಣೆಯಲ್ಲಿರಬೇಕೆಂಬ ಷರತ್ತು ಗ್ರೂಪ್-'ಸಿ' ಮತ್ತು 'ಡಿ'ಗೆ ಸೇರಿದ ಸರ್ಕಾರಿನೌಕರರಿಗೆ ಅನ್ವಯವಾಗತಕ್ಕದಲ್ಲವೆಂದು ಸ್ಪಷ್ಟವಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮೃತರಾಗಿರುವ ದಿವಂಗತ ಶ್ರೀ ಐ. ಕೆ. ಕುರುಬರ ಇವರು ಗ್ರೂಪ್ 'ಡಿ' ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ ಈ ಪ್ರಕರಣದಲ್ಲಿ ಕುಟುಂಬದ ಆರ್ಥಿಕ ಪರಿಸ್ಥಿತಿ ಪರಿಗಣನೆಗೆ ಬರುವುದಿಲ್ಲ.

***4) Conditions of Appointment:***

Appointment on compassionate grounds under these rules shall be subject to the following conditions namely:

(1) The family of the deceased Government Servant should be in a financial crisis or destitution.

Explaintion : (a) Family of deceased Government Servent shall be considered to be in financial crisis or destitution if the recurring monthly income of the family from all sources is less than the total emoluments including Dearness allowance, House Rent Allowance and City Compensatory Allowance admissible at Bangalore on the average of the minimum and the maximum of the scale of pay of the post of the First Division Assistant, as on the date of making application for compassionate appointment. For calcalating such monthly income, the income from family pension, lumpsum pensionary benefits and interest earned thereon shall be excluded.

(b) Recurring monthly income form all sources other than family pension, lumpsum pensionary benefits and the interest earned thereon, of the family for the purpose of this rule shall be computed by the Head of the Office or the Head of the Department or the appointing authority.

(i) on the basis of the last annual property return filed by the deceased Government Servant and if, for any reason it is not available, on the basis of the certificate of income issued by a Revenue Officer not below the rank of Tashildar, and

ಕುಲಸಚಿವರು

ಕುಲಪತಿಗಳು

(ii) in case any member of the family of the deceased Government Servant is employed in any State or Central Government Service or a public or private sector undertaking or a private establishment, on the basis of a certificate issued by his employer and in case such member is self employed on the basis of certificate issued by a revenue officer not below the rank of Tahsildar.

**Age Limit as per Change Clayse 4(2) :**

(2) Person seeking be within the age limit specified for the post in the relevant rules of recruitment specilly made in respect of any service or post read with sub rule 93) of rule 6 of the Karnataka Civil Services (General Recruitment) Rules, 1977 and where it is not so specified such person shall be within the age limits specified in the Karnataka Civil Services (General Recruitment) Rules, 1977.

ಈ ಉಪನಿಯಮದ ಪ್ರಕಾರ ಹಾಗೂ ಪ್ರಚಲಿತ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 55 ಸೇನೆನಿ 2008 ದಿ:15.01.2009 ರ ಪ್ರಕಾರ ಹಿಂದೂ ಕುರುಬರ ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿದ್ದು, ಸದರಿ ನೇಮಕಾತಿಗೆ 35 ವರ್ಷಗಳ ವಯೋಮಿತಿ ಇರುತ್ತದೆ. ಅರ್ಜಿದಾರರು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಮುಖ್ಯೋಪಾಧ್ಯಾಯರು, ಉಪ ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, (ಪ್ರೌಢ ಶಾಲಾ ವಿಭಾಗ) ನವಲೂರ, ಧಾರವಾಡ ಇವರಿಗೆ ಕಳುಹಿಸಲಾಗಿ ನೈಜವಾಗಿರುವ ಬಗ್ಗೆ ಪತ್ರ ಸಂಖ್ಯೆ. ಸ.ಪ್ರೌ.ಶಾನ/ ಕಮಾರ.ಜಿ.ಕ./ವಪ್ರಪ/ಪ.ದೃ/ಕುರಿತು/2022 ದಿನಾಂಕ 24.03.2022 ರ ಪತ್ರ ಸ್ವೀಕೃತವಾಗಿದ್ದು, ಅದರ ಪ್ರಕಾರ ಅರ್ಜಿದಾರರ ಜನ್ಮ ದಿನಾಂಕ 27.07.1992 ಇದ್ದು ಅರ್ಜಿ ಸಲ್ಲಿಸಿದ ದಿನಾಂಕ 25.03.2011 ರಂದು 18 ವರ್ಷ 07 ತಿಂಗಳು 26 ದಿನಗಳು ಪೂರ್ಣಗೊಂಡಿರುತ್ತದೆ.

ಸರ್ಕಾರಿ ಅಧಿಸೂಚನೆ ಸಂ. ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ: 12.09.1996 ರ ಉಪನಿಯಮ 3 ಹಾಗೂ 4 ರ ಪ್ರಕಾರ ಇತರೆ ಷರತ್ತುಗಳು ಈ ಕೆಳಗಿನಂತಿರುತ್ತದೆ.

(3) Person seeking appointment should possess the minimum qualification specified for the post in the relevant rules of recruitment specially made in respect of any service or post.

[1][Provided the nothing in this sub rule (5) of rule 5 of the Karnataka Civil Services (General Recruitment) Rules, 1977 in so for as it relates to educational qualification, shall apply to appointment under these rules to any Group 'D' post.']

[2][(4) Appointment shall be confined to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Sceretariat as may be revised from time to time and any other post in either of the groups as may be specified by the Government from time to time.]

(5) Appointment shal be made only against a direct recruitment vacancy.

ಈ ಮೇಲಿನ ಉಪನಿಯಮದ ಪ್ರಕಾರ ಈ ವಿಶ್ವವಿದ್ಯಾಲಯದ ನೌಕರರ ನೇಮಕಾತಿ ಅನುಶಾಸನ 1988 ರ ಪ್ರಕಾರ ಪದವಿ ಪೂರ್ವ ಹಾಗೂ ಅದಕ್ಕೆ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಸಿ' ವೃಂದದ ಕಿರಿಯ ಸಹಾಯಕ ಹುದ್ದೆಗೆ ಅಥವಾ 4 ನೇ ತರಗತಿ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಡಿ' ವೃಂದದ ಹುದ್ದೆಗೆ ಹಾಗೂ ಇದಕ್ಕಿಂತ ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಸಫಾಯಿ ಕರ್ಮಚಾರಿ (ಜಾಡಮಾಲಿ) ಹುದ್ದೆಗೆ ಸಾಮಾನ್ಯವಾಗಿ ನೇಮಕಾತಿ ಮಾಡಲಾಗುತ್ತಿದೆ.

ಅದರ ಅನುಸಾರ ಅರ್ಜಿದಾರರ ಶೈಕ್ಷಣಿಕ ಅರ್ಹತೆಯು ನಾಲ್ಕನೇ ತರಗತಿ ಅಂಕಪಟ್ಟಿಯು ದೃಢೀಕರಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಹರ ವಲಯ, ಧಾರವಾಡ ಇವರಿಗೆ ಅಂಕಪಟ್ಟಿಗಳನ್ನು ಕಳುಹಿಸಲಾಗಿತ್ತು. ಅದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಹರ ವಲಯ, ಧಾರವಾಡ ತಮ್ಮ ಪತ್ರ ಸಿ.4/ಕು.ಬಿ.ಕು/ಅಂಕ.ಪ/ಪ.ಮಾ/ನೈಜತೆ/ಸಿ.ಆರ್./124/2021-22/04 ದಿನಾಂಕ 31.03.2022 ರ ಮೂಲಕ, ನಾಲ್ಕನೇ ತರಗತಿ ಅಂಕಪಟ್ಟಿಯು ಈ ಇಲಾಖೆಯ ದಾಖಲೆಗಳೊಡನೆ ಪರಿಶೀಲಿಸಲಾಗಿ ಅದು ನೈಜವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 5 ಈ ಕೆಳಗಿನಂತಿರುತ್ತದೆ.

*(5) Application for appointment :*

Every dependent of a deceased Government Servant, Seeking appointment under these rules shall make an application within one year from the date of death of the Government Servant, in such from, as may

ಕುಲಸಚಿವರು ಕುಲಪತಿಗಳು

be notified by the Government, from time to time, to the Head of the Department under whom the deceased Government servant was working.

[1][Provided that in the case of a minor he must have attained the age of eighteen years within one year from the date of death of the Government Servant and he must make an application within one year thereafter.]

ಅರ್ಜಿದಾರರ ತಂದೆ ಹಾಗೂ ಈ ವಿಶ್ವವಿದ್ಯಾಲಯದ ನೌಕರರಾದ ದಿವಂಗತ ಶ್ರೀ ಭೀಮಪ್ಪ ಕೆ. ಕುರುಬರ ಇವರು ದಿನಾಂಕ 26.10.2010 ರಂದು ನಿಧನರಾಗಿರುತ್ತಾರೆಂದು, ಸರ್ಕಾರದ ಜನನ ಮತ್ತು ಮರಣಗಳ ಮುಖ್ಯ ರಜಿಸ್ಟ್ರಾರ್ ಇವರಿಂದ ಪಡೆದ ಮರಣ ಪ್ರಮಾಣ ಪತ್ರದ ಸಂಖ್ಯೆ. 2/2010/2160 ದಿನಾಂಕ 08.11.2010 ರಂದು ಪಡೆದು ಸಲ್ಲಿಸಿದ ಮರಣ ಪ್ರಮಾಣಪತ್ರದಲ್ಲಿ ಉಲ್ಲೇಖ ಇರುತ್ತದೆ. ಈ ಉಪ ನಿಯಮದ ಪ್ರಕಾರ ನೇಮಕಾತಿಗೆ ನೌಕರರು ಮೃತರಾದ ನಿಗದಿತ ಒಂದು ವರ್ಷದ ಅವಧಿಯಲ್ಲಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 6 ರ ಆಯ್ದ ಭಾಗ ಈ ಕೆಳಗಿನಂತಿರುತ್ತದೆ.

*(6) Appointment by the Competent Authority :*

(1) On receipt of the application under rule 5, the Head of the Department, if satisfied that the applicant fulfills all the conditions specified under these rules, shall appoint, where he is the appointing authority and if not direct the appropriate appointing authority to issue the order of appointment.

(2) The appointment under sub-rule (1) shall be made as far as possible within a period of three months from the date of receipt of the application under rule 5.

ಶ್ರೀ ಕುಮಾರ ಬಿ. ಕುರುಬರ ಇವರು ನಾಲ್ಕನೇ ತರಗತಿ ಉತ್ತೀರ್ಣಗೊಂಡಿರುವುದರಿಂದ ಮೇಲ್ಕಾಣಿಸಿದ ಕವಿವಿ ಅನುಶಾಸನವನ್ನು ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಸಿಪಾಯಿ ಹುದ್ದೆಗೆ ನೇಮಕ ಮಾಡುವ ಕುರಿತು ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## <u>ನಿರ್ಣಯ</u>

ಶ್ರೀ ಕುಮಾರ ಬಿ. ಕುರುಬರ ಇವರನ್ನು ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ (ಸಿಪಾಯಿ) ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಿ, **KCS** ನಿಯಮದಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–07: ವಿಷಯ–:** ಶ್ರೀ ರಾಮು ಎಚ್. ರಾಠೋಡ, ಸಹಾಯಕರು, ಕವಿವಿ ಸ್ನಾತಕೋತ್ತರ ಕೇಂದ್ರ, ಕೋಡಿಬಾಗ ಕಾರವಾರ ಇವರು ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸಿ. ಟಿ. ಹರಿಕಂತ್ರಾ, ಸಹಾಯಕರು ಇವರು ನಿವೃತ್ತಿ ಹೊಂದಿದ ಕಾರಣ ಅವರ ಹುದ್ದೆಯ ಕರ್ತವ್ಯವನ್ನು ಹೆಚ್ಚುವರಿಯಾಗಿ ನಿರ್ವಹಿಸಿದ್ದಕ್ಕೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸುವ ಕುರಿತು.

**ಪ್ರಸ್ತಾವನೆ :**

ಹಣಕಾಸು ಅಧಿಕಾರಿಗಳು ಕವಿವಿ ಧಾರವಾಡ ಇವರು ತಮ್ಮ ಪತ್ರ ದಿನಾಂಕ :12.03.2021 ರ ಮೂಲಕ ಶ್ರೀ ರಾಮು ಎಚ್. ರಾಠೋಡ, ಸಹಾಯಕರು, ಕವಿವಿ ಸ್ನಾತಕೋತ್ತರ ಕೇಂದ್ರ, ಕೋಡಿಬಾಗ ಕಾರವಾರ ಇವರಿಗೆ ಪ್ರಭಾರ ದಿನಾಂಕ 02.12.2019 ರಿಂದ 01.03.2020 ರ ವರೆಗೆ 7.5% ಹಾಗೂ ನಂತರದ ಅವಧಿಗೆ 15% ರಂತೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲಾಗಿರುತ್ತದೆ.

ಮುಂದುವರೆದು ಸದರಿಯವರಿಗೆ ಈ ಕಚೇರಿ ಆದೇಶ ನಂ3607 ದಿನಾಂಕ :20.11.2020 ರ ಪ್ರಕಾರ ಹಣಕಾಸು ವಿಭಾಗದಿಂದ ದಿನಾಂಕ : 02.12.2019 ರಿಂದ 31.01.2021 ರ ವರೆಗೆ ಪ್ರಭಾರ ಭತ್ಯೆ ಪಾವತಿಸಲಾಗಿದೆ. ಆದರೆ ಸದರಿಯವರ ಕುಲಸಚಿವರ ಆದೇಶದ ಸಂಖ್ಯೆ : ಕೆಯು/ಡಿಪಿಎಆರ್/ಎನ್.ಟಿ./04/2021/4979 ದಿನಾಂಕ : 02.03.2021 ರ ಪ್ರಕಾರ ಇವರು ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಹೊಂದಿದ್ದಾರೆ. ಆದ್ದರಿಂದ ಸದರಿಯವರಿಗೆ ಇನ್ನು ಮುಂದೆ ಪ್ರಭಾರ ಭತ್ಯೆಯನ್ನು ಪಾವತಿಸುವ ಬಗ್ಗೆ ತಿಳಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದುದೆಂದು ತಿಳಿಸಿರುತ್ತಾರೆ.

ಕಾರಣ ಸದರಿಯವರು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕಾರ್ಯವೈಖರಿ (Work Load/Job Chart) ಯಾದಿಯ ವಿವರ ಈ ಕೆಳಗಿನಂತಿದೆ.

| ಅ.ನಂ. | ಸದರಿಯವರು ನಿರ್ವಹಿಸುತ್ತಿರುವ ಕಾರ್ಯ | ಸದರಿಯವರು ನಿರ್ವಹಿಸುತ್ತಿರುವ ಪ್ರಭಾರಿ ಕಾರ್ಯ |
|---|---|---|
| 1 | Academic and Admission Work | Ph.D. Marine Biology Work |
| 2 | M.Sc. Marine Biology Adm./Work | Ph.D. Marine Biology Entrance Work |
| 3 | M.Com Admission Work | Ph.D. Course Work Examination Work |
| 4 | M.A. English Admission Work | Students Scholarship Work |
| 5 | Examination Work | BOS Meeting Work |
| 6 | Student Monthly Attendance Work | BOE Files |
| 7 | M.Sc. Entrance Test Works | PMEB Files |
| 8 | M.Com/M.A./M.Sc. Exam Work | Department Building Maintenance Files |
| 9 | Departments Files Maintenance | |

ಮುಂದುವರೆದು, ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಸಹಾಯಕ ಹುದ್ದೆ 85 ಕಾರ್ಯನಿರತ 79 ಖಾಲಿ ಹುದ್ದೆ 06 ಇರುವುದರಿಂದ ಸದರಿಯವರಿಗೆ ಶ್ರೀ ಸಿ. ಟಿ. ಹರಿಕಂತ್ರಾ, ಸಹಾಯಕರು ಇವರ ನಿವೃತ್ತಿಯಿಂದ ತೆರವಾದ ಸಹಾಯಕ ಹುದ್ದೆಯ ಪ್ರಭಾರ ಭತ್ಯೆಯನ್ನು ದಿನಾಂಕ : 01.02.2021 ರಿಂದ ಮಂಜೂರು ಮಾಡುವ ಕುರಿತು.

ಕೆಸಿಎಸ್‌ಆರ್ 68 ಹಾಗೂ ಪ್ರಸ್ತುತ ಸರ್ಕಾರಿ ಆದೇಶಗಳ ಪ್ರಕಾರ "ಒಬ್ಬ ಸರ್ಕಾರಿ ನೌಕರನು ತನ್ನ ಕರ್ತವ್ಯದ ಜೊತೆಗೆ ಮತ್ತೊಂದು ಹುದ್ದೆಯ ಕರ್ತವ್ಯಗಳ ಪ್ರಭಾರವನ್ನು ಹೊಂದಿರಲು ನಿಯುಕ್ತನಾದಾಗ, ಮತ್ತು ಅಂಥ ಪ್ರಭಾರವು ಸಾಕಷ್ಟು ಹೆಚ್ಚಿನ ಕೆಲಸವನ್ನು ಹೊಂದಿದ್ದರೆ, ಅವನನ್ನು ಹಾಗೆ ನೇಮಿಸುವ, ಸಕ್ಷಮಾಧಿಕಾರಿಯು, ಆ ಹುದ್ದೆಯ ಕನಿಷ್ಠ ವೇತನದ 7.5% ಕ್ಕೆ ನಿಗದಿ ಮಾಡುವ ಹೆಚ್ಚಿನ ವೇತನಕ್ಕೆ ಹಕ್ಕುಳ್ಳವನಾಗಿರುತ್ತಾನೆ".

ಅದರಂತೆ ಸದರಿಯವರ ಪ್ರಕರಣವನ್ನು ಪರಿಶೀಲಿಸಲಾಗಿ ಶ್ರೀ ರಾಮು ಎಚ್. ರಾಠೋಡ, ಸಹಾಯಕರು, ಕವಿವಿ ಸ್ನಾತಕೋತ್ತರ ಕೇಂದ್ರ, ಕೋಡಿಬಾಗ ಕಾರವಾರ ಇವರ ಅರ್ಜಿ ದಿನಾಂಕ 16.03.2020 ರ ಮೂಲಕ,

ಕುಲಸಚಿವರು ಕುಲಪತಿಗಳು

ಶ್ರೀ ಸಿ. ಟಿ. ಹರಿಕಂತ್ರಾ, ಸಹಾಯಕರು ಇವರು ನಿವೃತ್ತಿ ಹೊಂದಿದ ಪ್ರಯುಕ್ತ ಅವರ ಹುದ್ದೆಯ ಕಾರ್ಯಭಾರವನ್ನು ಹೆಚ್ಚುವರಿಯಾಗಿ ದಿನಾಂಕ 02.12.2019 ರಿಂದ 01.03.2020 ರ ವರೆಗೆ 7.5% ಹಾಗೂ ನಂತರದ ಅವಧಿಗೆ 15% ರಂತೆ ದಿನಾಂಕ :02.03.2020 ರಿಂದ 31.01.2021 ರ ವರೆಗೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲಾಗಿರುತ್ತದೆ. ಪ್ರಭಾರ ವ್ಯವಸ್ಥೆ ಕಲ್ಪಿಸುವ ಅವಧಿಯು 6 ತಿಂಗಳು ಮೀರುವಂತಿದ್ದರೆ ಸಿಂಡಿಕೇಟ ಸಭೆಯ ಒಪ್ಪಿಗೆ ಪಡೆಯಬೇಕಾಗುತ್ತದೆ. ಸದರಿಯವ್ವರು ಹೆಚ್ಚುವರಿಯಾಗಿ ಸಹಾಯಕ ಹುದ್ದೆಯ ಕಾರ್ಯವನ್ನು ನಿರ್ವಹಿಸುತ್ತಿರುವ ಅವಧಿ 6 ತಿಂಗಳು ಮೀರಿರುವುದರಿಂದ ಸದರಿಯವರಿಗೆ ಸರ್ಕಾರಿ ಆದೇಶ ನಂ. FD 08 SRS 2018 ದಿನಾಂಕ : 30.04.2019 ರ ಪ್ರಕಾರ, ದಿನಾಂಕ 01.02.2021 ರಿಂದ 31.12.2021 ರ ವರೆಗೆ ಸಹಾಯಕ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತದ ಶೇ. 15% ದರದಲ್ಲಿ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಕುರಿತು ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಶ್ರೀ ರಾಮು ಎಚ್. ರಾಠೋಡ, ಸಹಾಯಕರು, ಕವಿವಿ ಸ್ನಾತಕೋತ್ತರ ಕೇಂದ್ರ, ಕೋಡಿಬಾಗ ಕಾರವಾರ ಇವರು ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸಿ. ಟಿ. ಹರಿಕಂತ್ರಾ, ಸಹಾಯಕರು ಇವರು ನಿವೃತ್ತಿ ಹೊಂದಿದ ಕಾರಣ ಅವರ ಹುದ್ದೆಯ ಕರ್ತವ್ಯವನ್ನು ಹೆಚ್ಚುವರಿಯಾಗಿ ನಿರ್ವಹಿಸಿದ್ದಕ್ಕೆ ಪ್ರಭಾರ ಭತ್ಯೆಯನ್ನು KCS ನಿಯಮದಂತೆ ಮಂಜೂರು ಮಾಡಲು ಸಿಂಡಿಕೇಟ ಸಭೆಯು ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–08: ವಿಷಯ–:** ದಿನಾಂಕ:31.01.2022 ರಂದು ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸಿನ ಪ್ರಕಾರ ಕರ್ನಾಟಕ ವಿಶ್ವವಿದ್ಯಾಲಯದ ಪ್ರಯೋಗಾಲಯ ಮತ್ತು ಸಂಗ್ರಹ ಸಿಬ್ಬಂದಿಗಳಿಗೆ ಮುಂಬಡ್ತಿ ಜಾರಿ ಮಾಡಿದ ಮಾನ್ಯ ಕುಲಪತಿಗಳ ಕ್ರಮವನ್ನು ದೃಢೀಕರಿಸುವ ಕುರಿತು.

ಪ್ರಸ್ತಾವನೆ:

ಕರ್ನಾಟಕ ವಿಶ್ವವಿದ್ಯಾಲಯದ ಪ್ರಯೋಗಾಲಯ ಮತ್ತು ಸಂಗ್ರಹ ಸಿಬ್ಬಂದಿಗಳಿಗೆ ಮುಂಬಡ್ತಿ ವಿಷಯವನ್ನು ಪರಿಶೀಲಿಸಲು ದಿನಾಂಕ:31.01.2022 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿ ಸಭೆ ಜರುಗಿಸಲಾಯಿತು.

ಸದರಿ ಇಲಾಖಾ ಪದೋನ್ನತಿ ಸಮಿತಿಯ ಮುಂದೆ ಈ ಕೆಳಗಿನ ಹುದ್ದೆಗಳಿಗೆ ಮುಂಬಡ್ತಿ ನೀಡುವ ಪ್ರಸ್ತಾವನೆಯನ್ನು ಮಂಡಿಸಲಾಗಿ, ಸದರಿ ಸಮಿತಿಯು ಕೂಲಂಕುಷವಾಗಿ ಪರಿಶೀಲನೆ ಮಾಡಿ, ಖಾಲಿಯಿರುವ ಹುದ್ದೆಗಳ ಎದುರಿಗೆ ಈ ಕೆಳಗಿನ ಹುದ್ದೆಗಳಿಗೆ ಅರ್ಹರಿರುವ ಪ್ರಯೋಗಾಲಯ ಮತ್ತು ಸಂಗ್ರಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಶಿಫಾರಸ್ಸು ಮಾಡಲಾಯಿತು.

| Sl. No. | Name of persons likely to be promoted | Promoted Post | Date of Eligibility for Promotion | Remarks |
|---|---|---|---|---|
| 1 | 2 | 3 | 4 | 5 |
| 1. | Sri M.B. Ahemad | Supdt (L & S) | 01.08.2021 | |
| 2. | Smt. S.S.Menasinakai | Asst. Supdt (L & S). | 01.08.2021 | |
| 3. | Sri B.H.Bariker | Supdt (L & S) | 01.02.2022 | |
| 4. | Sri S.S.Katagihallimath | Asst. Supdt (L & S). | 01.02.2022 | |

ಕಾರಣ, ದಿನಾಂಕ.31.01.2022 ರಂದು ಜರುಗಿದ ಇಲಾಖಾ ಪದೋನ್ನತಿ ಸಭೆಯಲ್ಲಿ ಮುಂಬಡ್ತಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಮುಂಬಡ್ತಿಗೆ ಶಿಫಾರಸ್ಸು ಮಾಡಿರುವ ಪ್ರಯುಕ್ತ ಮಾನ್ಯ ಕುಲಪತಿಗಳ ಆದೇಶದ ಪ್ರಕಾರ ಸಿಂಡಿಕೇಟ ಸಭೆಯ ಅನುಮೋದನೆಗೊಳಪಟ್ಟು ದಿನಾಂಕ: 31.01.2022 ಮತ್ತು 01.02.2022 ರಂದು ಮೇಲಿನ ಪ್ರಯೋಗಾಲಯ ಮತ್ತು ಸಂಗ್ರಹ ಸಿಬ್ಬಂದಿಗಳಿಗೆ ಮುಂಬಡ್ತಿ ಆದೇಶಗಳನ್ನು ಜಾರಿ ಮಾಡಿರುವ ಕ್ರಮಕ್ಕೆ ಸಿಂಡಿಕೇಟ ಸಭೆಯ ಮುಂದೆ ದೃಢೀಕರಣಕ್ಕಾಗಿ ಮಂಡಿಸಲಾಯಿತು.

ನಿರ್ಣಯ

**ದಿನಾಂಕ 31.01.2022 ರಂದು ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸಿನ ಪ್ರಕಾರ ಕರ್ನಾಟಕ ವಿಶ್ವವಿದ್ಯಾಲಯದ ಪ್ರಯೋಗಾಲಯ ಮತ್ತು ಸಂಗ್ರಹ ಸಿಬ್ಬಂದಿಗಳಿಗೆ ಮುಂಬಡ್ತಿ ಜಾರಿ ಮಾಡಿದ ಮಾನ್ಯ ಕುಲಪತಿಗಳ ಕ್ರಮವನ್ನು ಸಿಂಡಿಕೇಟ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–09: ವಿಷಯ–:** ಶ್ರೀ. ಬಿ. ಎಚ್. ಬಾರಿಕೇರ, ಸಹಾಯಕ ಅಧೀಕ್ಷಕರು (ಪ್ರಯೋಗಾಲಯ & ಸಂಗ್ರಹ), ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರಿಗೆ ಪದೋನ್ನತಿ ಹೊಂದಿದ "ಸಹಾಯಕ ಅಧೀಕ್ಷಕರು" (ಪ್ರ&ಸಂ) ಹುದ್ದೆಯಲ್ಲಿ ಸ್ಥಿರೀಕರಿಸಿದ ಕ್ರಮವನ್ನು ದೃಢೀಕರಿಸುವ ಕುರಿತು.

ಟಿಪ್ಪಣಿ :–

ಶ್ರೀ. ಬಿ. ಎಚ್. ಬಾರಿಕೇರ, ಸಹಾಯಕ ಅಧೀಕ್ಷಕರು (ಪ್ರಯೋಗಾಲಯ & ಸಂಗ್ರಹ), ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರಿಗೆ ಈ ಕಚೇರಿ ಆದೇಶ ನಂ. 5620, ದಿನಾಂಕ: 23.03.2020 ರ ಪ್ರಕಾರ ದಿನಾಂಕ: 12.04.2018 ರಿಂದ ಅನ್ವಯವಾಗುವಂತೆ **"ಸಹಾಯಕ ಅಧೀಕ್ಷಕರು"**(ಪ್ರಯೋಗಾಲಯ & ಸಂಗ್ರಹ) ಹುದ್ದೆಗೆ ಪದೋನ್ನತಿಗೊಳಿಸಿ ನಿಯಮಾನುಸಾರ ಒಂದು ವರ್ಷ ಪರೀಕ್ಷಾರ್ಥ ಅವಧಿಯಲ್ಲಿರಿಸಲಾಗಿತ್ತು. ಸದರಿಯವರು , ಸದರ ಹುದ್ದೆಯಲ್ಲಿ ಒಂದು ವರ್ಷ ಪರೀಕ್ಷಾರ್ಥ ಅವಧಿ ಪೂರ್ಣಗೊಳಿಸಿದ ಪ್ರಯುಕ್ತ ಹಾಗೂ ವಿಭಾಗದ ಮುಖ್ಯಸ್ಥರ ಶಿಫಾರಸ್ಸಿನ ಮೇರೆಗೆ ಈ ಕಚೇರಿ ಆದೇಶ ನಂ. 2444 A, ದಿನಾಂಕ: 31.01.2022 ಪ್ರಕಾರ ಪದೋನ್ನತಿ ಹೊಂದಿದ ಹುದ್ದೆಯಲ್ಲಿ ಕಾಲಂ 4 ರಲ್ಲಿ ಕಾಣಿಸಿದಂತೆ ಸ್ಥಿರೀಕರಿಸಲಾಗಿದೆ.

| ಪದೋನ್ನತಿ ಹೊಂದಿದ ಹುದ್ದೆ | ಪದೋನ್ನತಿ ಹೊಂದಿದ ದಿನಾಂಕ | 1 ವರ್ಷ ಪರೀಕ್ಷಾರ್ಥ ಅವಧಿ ಪೂರೈಸಿದ ದಿನಾಂಕ | 1 ವರ್ಷ ಪರೀಕ್ಷಾರ್ಥ ಅವಧಿ ಸ್ಥಿರೀಕರಿಸಿದ ದಿನಾಂಕ |
|---|---|---|---|
| 1 | 2 | 3 | 4 |
| ಸಹಾಯಕ ಅಧೀಕ್ಷಕರು(ಪ್ರ&ಸಂ) | 12.04.2018 | 11.04.2019 | 12.04.2019 |

ಅದರಂತೆ, ಸದರಿಯವರಿಗೆ ಪದೋನ್ನತಿ ಹೊಂದಿದ ಸಹಾಯಕ ಅಧೀಕ್ಷಕರು(ಪ್ರ&ಸಂ) ಹುದ್ದೆಯಲ್ಲಿ ಸ್ಥಿರೀಕರಿಸಿದ ಕ್ರಮವನ್ನು ಸಿಂಡಿಕೇಟ ಸಭೆಯ ಮುಂದೆ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

**ಶ್ರೀ. ಬಿ. ಎಚ್. ಬಾರಿಕೇರ, ಸಹಾಯಕ ಅಧೀಕ್ಷಕರು (ಪ್ರಯೋಗಾಲಯ & ಸಂಗ್ರಹ), ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರಿಗೆ ಪದೋನ್ನತಿ ಹೊಂದಿದ "ಸಹಾಯಕ ಅಧೀಕ್ಷಕರು" (ಪ್ರ&ಸಂ) ಹುದ್ದೆಯಲ್ಲಿ ಸ್ಥಿರೀಕರಿಸಿದ ಕ್ರಮವನ್ನು ಸಿಂಡಿಕೇಟ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-10: ವಿಷಯ-: Consideration of the matter regarding_appointing Dr.S.V.Shettar, Professor (Retd.) Gandhian Studies, KU Dharwad and Dr.V.K.Revankar, Professor (Retd)PG Dept.of Chemistry, KU Dharwad as Adjunct Professors with remuneration as per statutory provisions.

**Note:**

Dr.(Smt)S.C.Shettar, Chairman, Dept.of Gandhian Studies, KU Dharwad vide her letter No. KU/DGS/2021-22/137 dated: 02.03.2022 has informed that after the retirement of Dr.S.V.Shettar on 31.01.2022 the department is left with one Teaching Assistant. There are no permanent teaching faculty members in the Dept.of Gandhian Studies from the academic year 2021-22 onwards. The Department offers a PG Diploma course with four papers and a social service cum field work camp coupled with guidance of the project work for report writing. Two OEC courses are offered for second and third semesters as well. The Chairman has enclosed brief bio-data of Dr.S.V.Shettar. In all there is a shortage of 14 hours workload per week and requested to provide the services of Dr.S.V.Shetter as Adjunct Professor or whichever designation the authorities consider suited to him.

Further, the Chairman, PG Dept.of Chemistry, KU Dharwad vide his letter No.KU/Chem/2021-22 dated: 02.03.2022 has informed that after the retirement of Dr.V.K.Revankar on 28.02.2022, the department is left with only Prof.J.Seetharamappa in In-Organic Chemistry and Prof. J.Seetharamappa has been assigned the additional responsibility of Sipe Head (DST) and the Director, USIC, KU Dharwad. Due to heavy workload to Prof.J.Seetharamappa and also Dr.V.K.Revankar has to work the Examination related work of 1st and 3rd Semester of Inorganic Chemistry as he is BOE Chairman & also informed that Dr.V.K.Revankar has the teaching / research experience of more than 33 years and the service of Dr.V.K.Revankar is very essential for In-Organic Chemistry and also enclosed the brief biodata of Dr.V.K.Revankar.

Hence, In this regard, the Chairman, PG Dept.of Chemisty, KU Dharwad has informed that the service of Dr.V.K.Revankar is very essential to the PG Dept.of Chemistry in the interest of Students and requested to continue the services of Dr.V.K.Revankar by giving him any one position.

It is submitted that the statutory provisions for appointment of Adjunct Professor are as below.

**Qualification, appointment, pay and tenure:**

i) Adjunct Professor shall be invited or appointed on basis of expertise in teaching of the PG Students and/or distinguished researcher or technology contributors.

ii) Adjunct Professor should have the educational qualification on par with Professor of the University or high professional academic distinction or rich experience in concerned areas of research and development in the subject.

ಕುಲಸಚಿವರು

ಕುಲಪತಿಗಳು

iii) Adjunct Professor may also be invited from specialists from PSU's preferably having Doctoral qualifications; specialists from AEC, ICSSR, CSIR and other reputed public and private R & D establishments with high academic credentials.

iv) Adjunct Professor shall be appointed by University on the recommendation of Chairman of the Department or Departmental Council to the University for consideration.

**v) Adjunct Professor shall be paid Rs. 10,000/- for a visit of not less than seven days and meet the travel expenses and local hospitality.**

**vi) Adjunct Professor may also be appointed to teach a course for a semester, the remuneration shall be fixed by the Syndicate.**

**Duties and functions:**

i) Adjunct Professor shall have to be involved in teaching programmes of the Department/University.

ii) Adjunct Professor shall have to augment the expertise and provide necessary inputs to the Post Graduate as well as research Students and initiate Industry-University interaction wherever possible.

Hence, the matter regarding_appointing Dr.S.V.Shettar, Professor (Retd.) Gandhian Studies, KU Dharwad and Dr.V.K.Revankar, Professor (Retd)PG Dept.of Chemistry, KU Dharwad as Adjunct Professors with remuneration as per statutory provisions is placed before the Syndicate for its consideration.

## ನಿರ್ಣಯ

**Syndicate resolved to appoint Dr. S.V. Shettar, Professor (Retd), Department of Gandhian Studies & Dr. V.K. Revankar, Professor (Retd), Department of Chemistry as Adjunct Professors and they shall be paid the remuneration of Rs 20,000/- per month respectively from the date of joining to teach the course for a semester and they shall also be paid Rs.10,000/- respectively for a visit of not less than seven days and meet travel expenses and local hospitality as per clause No.2 (v) & (vi) of the Statute.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–11: ವಿಷಯ–**: ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಅನುಶಾಸನದ ಪ್ರಕಾರ ಶ್ರೀ. ಸಿದ್ಧರಾಮ ಎಸ್ ಬಳ್ಳೊಳ್ಳಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ನೇಮಕಾತಿ ಮಾಡಲು ಮಾನ್ಯ ಕುಲಪತಿಗಳು ಆದೇಶಿಸಿದ ಕ್ರಮವನ್ನು ಆಡಳಿತ ಮಂಡಳಿಯ ದೃಢೀಕರಣಕ್ಕಾಗಿ.

**ಪ್ರಸ್ತಾವನೆ:**

ಶ್ರೀ.ಎಸ್.ಆರ್.ಸಿಂದಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ಈ ಕಚೇರಿ ಆದೇಶ ನಂ.3813 ದಿನಾಂಕ.14.09.2016 ರ ಮೂಲಕ ಈ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೆಂದು ನೇಮಕಾತಿ ಮಾಡಿ ಕಾರ್ಯಕಾರಿ ಆದೇಶವನ್ನು ದಿನಾಂಕ 14.09.2016 ರಂದು ಜಾರಿಮಾಡಲಾಗಿರುತ್ತದೆ. ಅದರಂತೆ ಶ್ರೀ.ಎಸ್.ಆರ್. ಸಿಂದಗಿ ಇವರು ದಿನಾಂಕ 15.09.2016 ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ನಂತರ ಸದರಿಯವರು ವೈಯಕ್ತಿಕ ಕಾರಣಗಳಿಂದ ಕಾನೂನು ಸಲಹೆಗಾರ ಸೇವೆಯಿಂದ ಬಿಡುಗಡೆಗೊಳಿಸಲು ಕೋರಿರುವುದನ್ನು ಪರಿಗಣಿಸಿ ಕಚೇರಿ ಆದೇಶ ನಂ.557 ದಿನಾಂಕ.09.07.2021 ರ ಮೂಲಕ ದಿನಾಂಕ.09.07.2021 ರಂದು ಬಿಡುಗಡೆಗೊಳಿಸಲಾಗಿದೆ

ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಕಾನೂನು ಸಲಹೆಗಾರರ ನೇಮಕಾತಿ ಕುರಿತಂತೆ ವಿಶ್ವವಿದ್ಯಾಲಯವು ರಚಿಸಿದ ಅನುಶಾಸನದ ನಿಯಮ 2 ಈ ಕೆಳಗಿನಂತಿರುತ್ತದೆ.

2. APPOINTMENT, REMUNERATION AND TENURE:

(a) To strengthen the Legal Cell and to advise for proper handling of the University cases in the various Courts, a retired District Judge shall be appointed as Legal Adviser to the University, after procuring the list of retired District Judges residing at Hubli-Dharwad from the High Court Registrar General / Officer of Dharwad District Judge Court. The appointment shall be made by the Syndicate from the list for a period of 6 months which may be extended for a further period of three times of six months each. The Syndicate may dis-continue and substitute the Legal Adviser before the expiry of the tenure, if necessary.

(b) The Honorarium of the Legal Adviser shall be fixed by the Syndicate, as per Re-employment Rules/other related rules as per the K.C.S.R's.

ದಿನಾಂಕ 12.05.2016 ರಂದು ಜರುಗಿದ ಸಿಂಡಿಕೇಟ್ ಸಭೆ ನಿರ್ಣಯ ನಂ.13 ರಲ್ಲಿ "ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿಕೊಂಡ ಅನುಶಾಸನದ ಪ್ರಕಾರ ಕಾನೂನು ಕೋಶದ ಕಾನೂನು ಸಲಹೆಗಾರರ ನೇಮಕಾತಿ ಹಾಗೂ ನಿಯಮಾನುಸಾರ ಗೌರವಧನ ನಿಗದಿಪಡಿಸುವ ವಿಷಯದ ಕುರಿತು ಕುಲಪತಿಗಳಿಗೆ ಸಿಂಡಿಕೇಟ್ ಅಧಿಕಾರ ನೀಡಿರುತ್ತದೆ."

ನಿವೃತ್ತಿ ನಂತರ ಮರು ನೇಮಕಾತಿ ಹೊಂದಿದವರ ಗೌರವಧನ ನಿಗದಿಪಡಿಸುವ ಕೆ.ಸಿ.ಎಸ್.ಆರ್. ನಿಯಮ ಈ ಕೆಳಗಿನಂತಿರುತ್ತದೆ.

**313 (b)** The pay to be allowed on re-employment is subject to the following conditions all of which must be satisfied.

(i) Pay on re-employment plus pension (including pension equivalent of death-cum-retirement gratuity or gratuity in lieu of pension) should not exceed the substantive pay in a permanent post but not pay in a temporary post drawn before retirement or the officiating pay in cases. (where (The officiating post has been held) for not less than one year immediately prior to retirement).

**460** For purposes of regulating the grant of travelling allowances to re-employed pensioners, the following rules are laid down.

(i) Where the pension is held in abeyance during the period of re-employment the grade of the re-employed pensioner shall be determined in accordance with the pay actually received from time to time.

(ii) Where the pension is allowed to be drawn in addition to pay the re-employed pensioner should for purposes of this rule, be deemed to be in receipt of actual pay equal to his pay on re-employment plus the pension subject to the condition that, if the sum of such pay plus pension exceeds the pay attached to the post, if it is a fixed rate of pay or the maximum pay of the post, if it is on a timescale such excess shall be ignored.

ಕುಲಸಚಿವರು ಕುಲಪತಿಗಳು

(iii) For purposed of these rules, the amount of pension to be taken into account will be the amount originally sanctioned i.e., before commutation if any and will also include the pensionery equivalent of death-cum-retirement gratuity, if any.

(iv) The term pay used in clauses (i) and (ii) shall be deemed to include also honorarium on fixed monthly rates in respect of officers appointed on a contract basis

**8(23)** "Honorarium" means a recurring or non-recurring payment granted to a Government servant (from the Consolidated Fund of the State) under whom he is employed or of any other Government in India as remuneration office work of an occasional or intermittent character.

ಕಾನೂನು ಸಲಹೆಗಾರರೆಂದು ಮುಂದಿನ ಅವಧಿಗೆ ಬೇರೆ ಅರ್ಹ ಅಭ್ಯರ್ಥಿಗಳನ್ನು ನೇಮಿಸುವ ಪ್ರಕ್ರಿಯೆಗಾಗಿ ಧಾರವಾಡ ಹಾಗೂ ಧಾರವಾಡ ಜಿಲ್ಲೆಯಲ್ಲಿ ನೆಲೆಸಿರುವಂತಹ ನಿವೃತ್ತ ಜಿಲ್ಲಾ ನ್ಯಾಯಾಧೀಶರ ವಿವರ ಕೋರಿ ಮಾನ್ಯ ಉಚ್ಛ ನ್ಯಾಯಾಲಯದ ರಜಿಸ್ಟ್ರಾರ್ ಜನರಲ್‌ರವರಿಗೆ ಹಾಗೂ ಧಾರವಾಡದ ಮಾನ್ಯ ಜಿಲ್ಲಾ ನ್ಯಾಯಾಧೀಶರಿಗೆ ದಿನಾಂಕ.14.12.2020 ರ ಮೂಲಕ ಪತ್ರವನ್ನು ಬರೆಯಲಾಗಿತ್ತು. ಅದರಂತೆ ಸದರಿಯವರು ಹುಬ್ಬಳ್ಳಿ –ಧಾರವಾಡದಲ್ಲಿ ನೆಲೆಸಿರುವಂತಹ ಒಟ್ಟು 15 ಜನ ನಿವೃತ್ತ ಜಿಲ್ಲಾ ನ್ಯಾಯಾಧೀಶರ ಹೆಸರು ಮತ್ತು ವಿಳಾಸವನ್ನು ನೀಡಿರುತ್ತಾರೆ.

ಅವುಗಳಲ್ಲಿ ಮಾನ್ಯ ಕುಲಪತಿಗಳು ಧಾರವಾಡ ಜಿಲ್ಲೆಯಲ್ಲಿ ನೆಲೆಸಿರುವಂತಹ ಈ ಕೆಳಗಿನ ಮೂವರು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ವಿಶ್ವವಿದ್ಯಾಲಯದ ಕಾನೂನು ಕೋಶದ ಕಾನೂನು ಸಲಹೆಗಾರರ ನೇಮಕ ಕುರಿತಂತೆ ಒಪ್ಪಿಗೆ/ ಸಮ್ಮತಿಯನ್ನು ಪಡೆಯುವಂತೆ ಸೂಚಿಸಿರುವರು.

| Sl | Name | Date of retired | Address |
|---|---|---|---|
| 1. | Siddharama S Ballolli | 31.05.2018 | Dharwad |
| 2. | Eshappa K Bhute | 30.06.2020 | Dharwad |
| 3. | Rachappa K Talikoti | 31.07.2020 | Dharwad |

ಅದರಂತೆ, ಅನುಕ್ರಮವಾಗಿ ಶ್ರೀ.ಎಸ್.ಎಸ್.ಬಳ್ಳೊಳ್ಳಿ ಇವರಿಗೆ ಕಚೇರಿ ಪತ್ರ ದಿನಾಂಕ.27.05.2021 ರ ಮೂಲಕ ಪತ್ರವನ್ನು ಬರೆದು ವಿಶ್ವವಿದ್ಯಾಲಯದ ಕಾನೂನು ಕೋಶದ ಕಾನೂನು ಸಲಹೆಗಾರರ ನೇಮಕ ಮಾಡುವ ಕುರಿತಂತೆ ಒಪ್ಪಿಗೆ/ ಸಮ್ಮತಿಯನ್ನು ನೀಡುವಂತೆ ಕೋರಲಾಗಿತ್ತು. ಅದಕ್ಕೆ ಪ್ರತಿಯಾಗಿ ಸದರಿಯವರು ಪತ್ರ ದಿನಾಂಕ.16.07.2021 ರ ಪ್ರಕಾರ ಸಮ್ಮತಿಯನ್ನು ನೀಡಿದ್ದು ಇರುತ್ತದೆ.

ಮಾನ್ಯ ಕುಲಪತಿಗಳ ಆದೇಶದ ಪ್ರಕಾರ, ಶ್ರೀ. ಸಿದ್ಧರಾಮ ಎಸ್ ಬಳ್ಳೊಳ್ಳಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ಕಾನೂನು ಸಲಹೆಗಾರರ ನೇಮಕಾತಿ ಕುರಿತಂತೆ ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಅನುಶಾಸನದ ಮತ್ತು ಸಿಂಡಿಕೇಟ್ ಸಭೆಯ ಧೃಡೀಕರಣಕ್ಕೆ ಒಳಪಟ್ಟು ಈ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೆಂದು 6 ತಿಂಗಳ ಅವಧಿಗೆ ನೇಮಕಾತಿ ಮಾಡಿ, ಸದರಿಯವರಿಗೆ ಕಾನೂನು ಸಲಹೆಗಾರರೆಂದು ಕರ್ತವ್ಯ ನಿರ್ವಹಿಸಲು ರೂ.25,000/- ರೂಗಳ ಗೌರವಧನದೊಂದಿಗೆ ಮತ್ತು ವಾಹನ ಮತ್ತು ಇತರೆ ಭತ್ಯೆ ರೂ.5000/- ಪ್ರತಿ ತಿಂಗಳು ನಿಗದಿಪಡಿಸಿ ಆದೇಶ ಜಾರಿ ಮಾಡಲಾಗಿರುತ್ತದೆ. ಅದರಂತೆ ಸದರಿಯವರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೆಂದು ದಿನಾಂಕ.16.07.2021 ರಂದು ಹಾಜರಾಗಿರುತ್ತಾರೆ.

ಆದ್ದರಿಂದ, ಶ್ರೀ. ಸಿದ್ಧರಾಮ ಎಸ್ ಬಳ್ಳೊಳ್ಳಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ನೇಮಕಾತಿ ಮಾಡಲು ಮಾನ್ಯ ಕುಲಪತಿಗಳು ಆದೇಶಿಸಿದ ಕ್ರಮವನ್ನು ಆಡಳಿತ ಮಂಡಳಿ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## ನಿರ್ಣಯ

**ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಅನುಶಾಸನದ ಪ್ರಕಾರ ಶ್ರೀ. ಸಿದ್ಧರಾಮ ಎಸ್ ಬಳ್ಳೊಳ್ಳಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ನೇಮಕಾತಿ ಮಾಡಲು ಮಾನ್ಯ ಕುಲಪತಿಗಳು ಆದೇಶಿಸಿದ ಕ್ರಮವನ್ನು ಆಡಳಿತ ಮಂಡಳಿಯು ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–12: ವಿಷಯ–:** ನೇಮಕಗೊಂಡ ಹುದ್ದೆಯಲ್ಲಿ ಎರಡು ವರ್ಷಗಳ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿದ ಸಿಬ್ಬಂದಿಗಳ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸುವ ಪ್ರಸ್ತಾವನೆ ಪರಿಶೀಲಿಸುವ ಕುರಿತು.

ಪ್ರಸ್ತಾವನೆ :

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿವಿಧ ಹುದ್ದೆಗಳಲ್ಲಿ ನೇಮಣೂಕಿಗೊಂಡು ಅವರಿಗೆ ಧಾರಣ ಮಾಡಿರುವ ಹುದ್ದೆಯಲ್ಲಿ ಎರಡು ವರ್ಷಗಳ ಪರೀಕ್ಷಾರ್ಥ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿದ ಈ ಕೆಳಗಿನ 16 ಸಿಬ್ಬಂದಿಗಳ ಪರೀಕ್ಷಾರ್ಥ ಸೇವಾವಧಿ ಘೋಷಣೆ ಮಾಡುವುದು ಅವಶ್ಯಕವಾಗಿದ್ದು, ಈ ಕೆಳಗಿನ ಕಾಲಂ 2 ರಲ್ಲಿ ಕಾಣಿಸಿದ ಸಿಬ್ಬಂದಿಗಳು ಕಾಲಂ 3ರಲ್ಲಿ ಕಾಣಿಸಿದ ಅವರು ಧಾರಣ ಮಾಡಿರುವ ಹುದ್ದೆಯಲ್ಲಿ ಕಾಲಂ 4 ರಲ್ಲಿ ಕಾಣಿಸಿದ ದಿನಾಂಕದಂದು ನೇಮಕಾತಿ ಹೊಂದಿದ್ದು ಹಾಗೂ ಕಾಲಂ 5ರಲ್ಲಿ ಕಾಣಿಸಿದ ದಿನಾಂಕದಂದು ಅವರು ಎರಡು ವರ್ಷಗಳ ಪರೀಕ್ಷಾರ್ಥ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದರಿಂದ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಅನುಶಾಸನದ ಅನ್ವಯ ಕಾಲಂ 6 ರಲ್ಲಿ ಕಾಣಿಸಿದ ದಿನಾಂಕದಂದು ಅವರಿಗೆ ಧಾರಣ ಮಾಡಿರುವ ಹುದ್ದೆಯಲ್ಲಿ ಪರೀಕ್ಷಾರ್ಥ ಸೇವಾ ಅವಧಿ ಘೋಷಿಸಬೇಕಾಗುವುದು.

| ಅ. ನಂ. | ಹೆಸರು | ಧಾರಣ ಮಾಡಿರುವ ಹುದ್ದೆ | ನೇಮಕಾತಿ ಹೊಂದಿದ ದಿನಾಂಕ | ಪರೀಕ್ಷಾರ್ಥ ಸೇವೆ 2 ವರ್ಷ ಪೂರೈಸಿದ ದಿನಾಂಕ | ಪರೀಕ್ಷಾರ್ಥ ಸೇವೆ ಧೃಢೀಕರಿಸಿದ ದಿನಾಂಕ | ಶರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಶ್ರೀ. ಎಸ್. ಎಸ್. ವಾಘೆ | ಕಿರಿಯ ಅಭಿಯಂತರರು (ಎಲೆಕ್ಟ್ರಿಕಲ್) | 17.07.2019 | 16.07.2021 | 17.07.2021 | |
| 2. | ಶ್ರೀ. ಪಿ. ಎಸ್. ಮರಗಿ, | ಕಿರಿಯ ಸಹಾಯಕರು | 31.12.2018 | 30.12.2020 | 31.12.2020 | |
| 3. | ಶ್ರೀಮತಿ ಆರ್. ಎಸ್. ಶೇಖ್ | ಕಿರಿಯ ಸಹಾಯಕರು | 25.10.2019 | 24.10.2021 | 25.10.2021 | |
| 4. | ಶ್ರೀ ಎ. ಎಸ್. ಸ್ವಾಧಿ | ಕಿರಿಯ ಸಹಾಯಕರು | 25.10.2019 | 24.10.2021 | 25.10.2021 | |
| 5. | ಶ್ರೀ ವಿ. ಬಿ. ಕುಲಕರ್ಣಿ | ಕಿರಿಯ ಸಹಾಯಕರು | 03.01.2020 | 02.01.2022 | 03.01.2022 | |
| 6. | ಶ್ರೀಮತಿ ಎಸ್. ಡಿ. ಕನಸಾವಿ | ಸಿಪಾಯಿ | 25.07.2019 | 24.07.2021 | 25.07.2021 | |
| 7. | ಶ್ರೀ ಡಿ. ಎಸ್. ತಳವಾರ | ಸಿಪಾಯಿ | 17.07.2019 | 16.07.2021 | 17.07.2021 | |
| 8. | ಶ್ರೀ ಎನ್. ಬಿ. ಕೋಟಿ, | ಸಿಪಾಯಿ | 25.09.2019 | 24.09.2021 | 25.09.2021 | |
| 9. | ಶ್ರೀ ಎಫ್. ಎಂ. ಬೆಂಡಿಗೇರಿ | ಸಿಪಾಯಿ | 17.02.2020 | 16.02.2022 | 17.02.2022 | |
| 10. | ಶ್ರೀ ಎಚ್. ಆರ್. ಹೆಬ್ಬಳ್ಳಿ | ಮಾಲಿ/ಕೂಲಿ | 20.09.2019 | 19.09.2021 | 20.09.2021 | |
| 11. | ಶ್ರೀಮತಿ ಪಿ. ಬಿ. ಹೊಸಮನಿ | ಮಾಲಿ/ಕೂಲಿ | 17.10.2019 | 16.10.2021 | 17.10.2021 | |
| 12. | ಶ್ರೀ ಎಚ್. ಎನ್. ಲಮಾಣಿ | ಮಾಲಿ/ಕೂಲಿ | 18.10.2019 | 17.10.2021 | 18.10.2021 | |
| 13. | ಶ್ರೀ ಮಹಾದೇವ ಪಾಪಯ್ಯ | ಮಾಲಿ/ಕೂಲಿ | 21.10.2019 | 20.10.2021 | 21.10.2021 | |
| 14. | ಶ್ರೀ ಮಂಜುನಾಥನಾಯ್ಕ ಎಂ. | ಮಾಲಿ/ಕೂಲಿ | 04.11.2019 | 03.11.2021 | 14.11.2021 | |
| 15. | ಶ್ರೀ ಎಂ. ಎ. ತಳವಾರ | ಮಾಲಿ/ಕೂಲಿ | 29.11.2019 | 28.11.2021 | 29.11.2021 | |
| 16. | ಶ್ರೀ ಎಂ. ಎಂ. ಪೂಜಾರ | ಮಾಲಿ/ಕೂಲಿ | 07.02.2020 | 06.02.2022 | 07.02.2022 | |

ಕುಲಸಚಿವರು

ಕುಲಪತಿಗಳು

ಈ ಮೇಲ್ಕಾಣಿಸಿದ ಸಿಬ್ಬಂದಿಗಳ ಕಾರ್ಯವೈಖರಿಯ ಬಗ್ಗೆ ಹಾಗೂ ಸದರಿ ಸಿಬ್ಬಂದಿಗಳ ಎರಡು ವರ್ಷಗಳ ಗೌಪ್ಯತಾ ವರದಿಗಳ ಕುರಿತು ಅವರ ಮೇಲಾಧಿಕಾರಿಗಳಿಂದ ವರದಿಯನ್ನು ಪಡೆದುಕೊಳ್ಳಲಾಗಿದೆ.

ಕಾರಣ, ಈ ಮೇಲ್ಕಾಣಿಸಿದ ಸಿಬ್ಬಂದಿಗಳು ಎರಡು ವರ್ಷಗಳ ಪರೀಕ್ಷಾರ್ಥ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿದ ಪ್ರಯುಕ್ತ ಅವರ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸುವ ಕುರಿತು ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ನೇಮಕಗೊಂಡ ಹುದ್ದೆಯಲ್ಲಿ ಎರಡು ವರ್ಷಗಳ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿದ ಸಿಬ್ಬಂದಿಗಳ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸುವ ಪ್ರಸ್ತಾವನೆ ಪರಿಶೀಲಿಸಿದ ಸಿಂಡಿಕೇಟ ಸಭೆಯು ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–13: ವಿಷಯ–**: ಕರ್ನಾಟಕ ವಿಶ್ವವಿದ್ಯಾಲಯದ ಅಧೀನ ಮಹಾವಿದ್ಯಾಲಯಗಳು/ಸ್ನಾತಕೋತ್ತರ ವಿಭಾಗಗಳು/ ಸ್ನಾತಕೋತ್ತರ ಕೇಂದ್ರಗಳಿಗೆ ಪದವಿ ಪೂರ್ವ/ ಸ್ನಾತಕ/ಸ್ನಾತಕೋತ್ತರ ಕೋರ್ಸಗಳ ಶೈಕ್ಷಣಿಕ ಸಾಲಿನ ಮಧ್ಯಂತರದಲ್ಲಿ ಪಿಎಚ್.ಡಿ/ನೆಟ್/ಸೆಟ್ ಪದವಿ ಪಡೆದ ಅತಿಥಿ/ಸಹಾಯಕ ಉಪನ್ಯಾಸಕರಿಗೆ ಪದವಿ ಪಡೆದ ದಿನಾಂಕದಿಂದ ಯುಜಿಸಿ ಸಂಭಾವನೆ ನೀಡುವ ಬಗ್ಗೆ ಪರಿಶೀಲನೆ ಕುರಿತು.

ಟಿಪ್ಪಣಿ:

1. "ಕರ್ನಾಟಕ ಮಹಾವಿದ್ಯಾಲಯದ ಅಧೀನ ಮಹಾವಿದ್ಯಾಲಯಗಳ ಪದವಿ ಪೂರ್ವ/ಸ್ನಾತಕ/ಸ್ನಾತಕೋತ್ತರ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳಿಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ ಕಾರ್ಯಭಾರಕ್ಕನುಗುಣವಾಗಿ (ಹೆಚ್ಚುವರಿ ಕಾರ್ಯಭಾರ) ಅತಿಥಿ/ಸಹಾಯಕ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಿ ಅರ್ಹ ಅಭ್ಯರ್ಥಿಗಳಿಗೆ ಕವಿವಿಯ **Guidelines for Inviting Guest Faculty/Teaching Assistant -2007 and 2013-14 onwards** ರನ್ವಯ ಸಂದರ್ಶನ ಜರುಗಿಸಿ ಮೆರಿಟ್ ಕಮ್ ರೋಸ್ಟರ್ ಪದ್ಧತಿ ಅಳವಡಿಸಿ ನೇಮಕಾತಿ ಮಾಡಲಾಗುತ್ತದೆ.

2. ಸದರಿ ಆಯ್ಕೆಯಾದ ಅತಿಥಿ/ಸಹಾಯಕ ಉಪನ್ಯಾಸಕರಿಗೆ ಸುತ್ತೋಲೆ ಸಂಖ್ಯೆ:178 ದಿನಾಂಕ:28.08.2019ರ ಪ್ರಕಾರ ಸಂಭಾವನೆಯನ್ನು **Non UGC** ಮತ್ತು **UGC** ಎಂದು ವಿಂಗಡಣೆ ಮಾಡಲಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳು **Ph.D** ಅಥವಾ **NET/SET/SLET** ಉತ್ತೀರ್ಣರಾದಲ್ಲಿ **UGC** ಸಂಭಾವನೆ ನೀಡಲಾಗುತ್ತಿದೆ ಹಾಗೂ ಪಿಎಚ್.ಡಿ ಅಥವಾ **NET/SET/SLET** ಇಲ್ಲದೆ ಇರುವ ಅಭ್ಯರ್ಥಿಗಳಿಗೆ **Non UGC** ಸಂಭಾವನೆ ನೀಡಲಾಗುತ್ತದೆ.

3. **Ph.D** ಅಥವಾ **NET/SET/SLET** ಇಲ್ಲದೆ ಅತಿಥಿ/ಸಹಾಯಕ ಉಪನ್ಯಾಸಕರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಾ ಶೈಕ್ಷಣಿಕ ವರ್ಷದ ಮಧ್ಯಂತರದಲ್ಲಿ **Ph.D** ಅಥವಾ **NET/SET/SLET** ಪದವಿಯನ್ನು ಪಡೆದು, ಪದವಿ ಪಡೆದ ದಿನಾಂಕದಿಂದ **Non UGC** ಸಂಭಾವನೆಯನ್ನು **UGC** ಸಂಭಾವನೆಗೆ ಪರಿವರ್ತಿಸಲು ಅತಿಥಿ/ಸಹಾಯಕ ಉಪನ್ಯಾಸಕರುಗಳು ವಿಭಾಗದ ಪ್ರಾಚಾರ್ಯರು/ಅಧ್ಯಕ್ಷರುಗಳ ಮುಖಾಂತರ ವಿನಂತಿ ಅರ್ಜಿಗಳು ಸಲ್ಲಿಕೆಯಾಗುತ್ತಿರುತ್ತವೆ.

ಆದ್ದರಿಂದ, ಶೈಕ್ಷಣಿಕ ವರ್ಷದ ಮಧ್ಯಂತರದಲ್ಲಿ ಪಿಎಚ್.ಡಿ ಅಥವಾ ನೆಟ್/ಸೆಟ್/ಸ್ಲೇಟ್ ಪದವಿಗಳನ್ನು ಪಡೆದಂತಹ ಅತಿಥಿ/ಸಹಾಯಕ ಉಪನ್ಯಾಸಕರುಗಳಿಗೆ ಪದವಿ ಪಡೆದ ದಿನಾಂಕದಿಂದ ಅನ್ವಯವಾಗುವಂತೆ ಯುಜಿಸಿ ಸಂಭಾವನೆ ನೀಡುವ ಕುರಿತು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ ಅಧೀನ ಮಹಾವಿದ್ಯಾಲಯಗಳು/ಸ್ನಾತಕೋತ್ತರ ವಿಭಾಗಗಳು/ ಸ್ನಾತಕೋತ್ತರ ಕೇಂದ್ರಗಳು/ ಪದವಿ ಪೂರ್ವ/ಸ್ನಾತಕ/ಸ್ನಾತಕೋತ್ತರ ಕೋರ್ಸಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ಹಾಗೂ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ/ಸಹಾಯಕ ಉಪನ್ಯಾಸಕರುಗಳು **Ph.D** ಅಥವಾ **NET/SET/SLET** ಇಲ್ಲದೆ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರು ಶೈಕ್ಷಣಿಕ ವರ್ಷದ ಮಧ್ಯದಲ್ಲಿ **Ph.D** ಅಥವಾ **NET/SET/SLET** ಪದವಿಯನ್ನು ಪಡೆದಿದ್ದರೆ, ಆ ದಿನಾಂಕವನ್ನು ಪರಿಗಣಿಸದೆ ಮುಂದಿನ ಸೆಮಿಸ್ಟರದಿಂದ ಅವರಿಗೆ **Non UGC** ಸಂಭಾವನೆಯಿಂದ **UGC** ಸಂಭಾವನೆ ನೀಡಲು ಠರಾಯಿಸಲಾಯಿತು. ಮುಂದುವರಿದು, ಸದರ ಸಂಭಾವನೆಗೆ ಸಂಬಂಧಿಸಿದಂತೆ ಯಾವುದೇ ಹಿಂಬಾಕಿಯನ್ನು ಬಟವಡೆ ಮಾಡದಿರುವಂತೆ ನಿರ್ಣಯಿಸಲಾಯಿತು.

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–14: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಜಾಹೀರಾತು ಏಜೆಂಟರನ್ನಾಗಿ 2 ವರ್ಷಗಳ (2020–21 ಮತ್ತು 2021–22) ಅವಧಿಗೆ ನೇಮಕ ಮಾಡಿದ ಕುರಿತು, ಸಮಿತಿಯು ಹಾಗೂ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯ ದೃಢೀಕರಣಕ್ಕಾಗಿ.

**ಟಿಪ್ಪಣಿ :**

2020–21 ಮತ್ತು 2021–22 ನೇ ಸಾಲಿನ (ಎರಡು ವರ್ಷ) ಜಾಹೀರಾತು ಟೆಂಡರ ಪ್ರಕಟಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಅಧಿಕೃತ ಏಜೆಂಟ್‌ರನ್ನು ನೇಮಕ ಮಾಡಿಕೊಳ್ಳಲು ದಿನಾಂಕ: 05/02/2021 ರಂದು ಇ–ಪ್ರಾಕ್ಯೂರಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿತ್ತು. ಈ ಕೆಳಗಿನ ಟೆಂಡರುದಾರರು ಸಲ್ಲಿಸಿದ ಹಣಕಾಸಿನ ಬಿಡ್‌ನ್ನು ಪರಿಶೀಲಿಸಿದಾಗ, ಈ ಕೆಳಕಾಣಿಸಿದಂತೆ ಡಿ.ಆಯ್.ಪಿ. ದರದ ಮೇಲೆ ರಿಯಾಯತಿಯನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿತು.

**ಹಣಕಾಸಿನ ಬಿಡ್‌ನ ತುಲನಾತ್ಮಕ ಪಟ್ಟಿ ಈ ಕೆಳಗಿನಂತಿರುತ್ತದೆ:**

| ಕ್ರಮ ಸಂಖ್ಯೆ | ಏಜೆಂಟ್‌ರ ಹೆಸರು ಮತ್ತು ವಿಳಾಸ | ಡಿ.ಆಯ್.ಪಿ ದರಗಳ ಮೇಲೆ ಏಜೆಂಟರು ಸಲ್ಲಿಸಿದ ರಿಯಾಯತಿ(Discount) ದರ |
|---|---|---|
| 1) | Ravi Narayan Deshpande<br>M/s Deshpande Publicity<br>Mahishi Road, Malamaddi,<br>Dharwad, Karntaka-580 007. | 10% |
| 2) | Raveendra Jalaraddi<br>M/s R.J. Media<br>Krishna Mansion, At U.B. Hill Circle,<br>Dharwad, Karnataka-580 007. | 5% |

ಮೇಲ್ಕಾಣಿಸಿದ ಟೆಂಡರುದಾರರಾದ Ravi Narayan Deshpande, M/s Deshpande Publicity, Mahishi Road, Malamaddi, Dharwad, Karntaka-580007 ಇವರು ಶೇಕಡಾ 10% ರಷ್ಟು ರಿಯಾಯತಿ ನೀಡಲು ದರಪಟ್ಟಿಯನ್ನು ಸಲ್ಲಿಸಿರುವುದರಿಂದ ಸದರಿಯವರಿಗೆ 2020–21 ಮತ್ತು 2021–22 ನೇ ಸಾಲಿನ (ಎರಡು ವರ್ಷ) ಜಾಹೀರಾತು ಟೆಂಡರ ಪ್ರಕಟಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲು ನೇಮಕ ಮಾಡಿಕೊಳ್ಳಲು ಸಭೆಯಲ್ಲಿ ಒಮ್ಮತದಿಂದ ಒಪ್ಪಿರುವುದನ್ನು ಹಾಗೂ ಸದರಿ ವಿಷಯವನ್ನು ಸಿಂಡಿಕೇಟ ಸಭೆಯಲ್ಲಿ ದೃಢೀಕರಣಕ್ಕಾಗಿ ಸಲ್ಲಿಸಲು ಸಮಿತಿಯು ಸೂಚಿಸಿತು.

ಆದ್ದರಿಂದ, ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗುವ ಜಾಹಿರಾತುಗಳನ್ನು ನೀಡುವ ಕಾರ್ಯಗಳನ್ನು ಗಮನದಲ್ಲಿ ಇರಿಸಿ ಆಡಳಿತಕ್ಕೆ ತೊಂದರೆಯಾಗದಂತೆ ಮತ್ತು ಈ ವಿಷಯವಾಗಿ ಸಮಿತಿಯು ಕೈಗೊಂಡ ನಿರ್ಣಯದಂತೆ ಮಾನ್ಯ ಕುಲಪತಿಗಳ ಆದೇಶ ದಿನಾಂಕ: 10/03/2021 ರಂತೆ Ravi Narayan Deshpande, M/s Deshpande Publicity, Mahishi Road, Malamaddi, Dharwad, Karntaka-580007 ಇವರಿಗೆ 2020–21 ಮತ್ತು 2021–22 ನೇ ಸಾಲಿನ (ಎರಡು ವರ್ಷದ) ಜಾಹೀರಾತು ಟೆಂಡರ ಪ್ರಕಟಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಅಧಿಕೃತ ಏಜೆಂಟ್‌ರನ್ನು ನೇಮಿಸಿಕೊಂಡಿರುವ ಆದೇಶ ಪತ್ರವನ್ನು ದಿನಾಂಕ: 13/03/2021 ರಂದು ಕಳುಹಿಸಿಕೊಡಲಾಯಿತು. ಸದರ ವಿಷಯವನ್ನು ಸಿಂಡಿಕೇಟ ಸಭೆಯ ದೃಢೀಕರಣಕ್ಕಾಗಿ ಕಲಂನ್ನು ಮಂಡಿಸಲಾಯಿತು.

## ನಿರ್ಣಯ

**ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಜಾಹೀರಾತು ಏಜೆಂಟರನ್ನಾಗಿ 2 ವರ್ಷಗಳ (2020–21 ಮತ್ತು 2021–22) ಅವಧಿಗೆ ನೇಮಕ ಮಾಡಿದ ಕುರಿತು, ಸಮಿತಿಯು ಹಾಗೂ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–15: ವಿಷಯ–: Consideration of the proceedings of the meeting of the Library Advisory Board held on 16-08-2021.

**NOTE:**

The meeting of the Library Advisory Board was held on 16-08-2021 at Prof. S.S. Basavanal Library, Karnatak University, Dharwad.

The proceedings of the said meeting are placed before the Syndicate for its consideration.

ನಿರ್ಣಯ

**Syndicate considered and approved the proceedings of the meeting of the Library Advisory Board held on 16-08-2021.**

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–16: ವಿಷಯ–:** ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

**ಟಿಪ್ಪಣೆ:**

ಕರ್ನಾಟಕ ವಿಶ್ವವಿದ್ಯಾಲಯದ ಈ ಕೆಳಗೆ ನಮೂದಿಸಿದ ದಿನಾಂಕಗಳಂದು ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಅಧಿಕಾರದ ಅವಧಿಯು ಕೊನೆಗೊಂಡ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ರ ಅಡಿಯಲ್ಲಿ, ಜೇಷ್ಠತೆಯ ಅನುಸಾರ ಆಯಾ ವಿಭಾಗಗಳ ಹಿರಿಯ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿದ್ದರಿಂದ, ಸಿಬ್ಬಂದ್ದಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪಡೆದ ವಿವಿಧ ಅಧ್ಯಯನ ವಿಭಾಗಗಳ ಪ್ರಸ್ತುತ ಶಿಕ್ಷಕರ ಜೇಷ್ಠತೆಯ ಯಾದಿಯ ಪ್ರಕಾರ ಈ ಕೆಳಗಿನಂತೆ ಶಿಕ್ಷಕರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ತೆಗೆದುಕೊಂಡ ಕ್ರಮದಂತೆ ಆಯಾ ವಿಭಾಗಗಳ ಶಿಕ್ಷಕರ ಜೇಷ್ಠತೆಯ ಅನುಸಾರವಾಗಿ ಹಿರಿಯ ಪ್ರಾಧ್ಯಾಪಕರನ್ನು / ಆಯಾ ವಿಭಾಗದಲ್ಲಿ ಶಿಕ್ಷಕರು ಇಲ್ಲದೇ ಇರುವುದರಿಂದ ಸಂಬಂಧಿಸಿದ ನಿಖಾಯದ ಡೀನರನ್ನು ವಿಭಾಗದ ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ.

| ಅ.ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ ದಿನಾಂಕ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 1) | ಸಸ್ಯಶಾಸ್ತ್ರ ಅಧ್ಯಯನ ವಿಭಾಗ | ಡಾ. ಎಚ್. ನಿರಂಜನಮೂರ್ತಿ., ಪ್ರಾಧ್ಯಾಪಕರು | 04–01–2022 | ಡಾ. ಎಂ. ಜಯರಾಜ್, ಪ್ರಾಧ್ಯಾಪಕರು | 04.01.2022 | 04–01–2022 |
| 2) | ಸಮಾಜಕಾರ್ಯ ಅಧ್ಯಯನ ವಿಭಾಗ | ಡಾ.(ಶ್ರೀಮತಿ). ಎಸ್. ಆರ್. ಮಾನೆ, ಪ್ರಾಧ್ಯಾಪಕರು | 17–01–2022 | ಡಾ.(ಶ್ರೀಮತಿ). ಎಸ್. ಆರ್. ಮಾನೆ, ಪ್ರಾಧ್ಯಾಪಕರು | 18–01–2022 | 14–02–2022 |
| 3) | ಗಾಂಧಿ ಅಧ್ಯಯನ ವಿಭಾಗ | ಡಾ. ಎಸ್.ವಿ. ಶೆಟ್ಟರ ಪ್ರಾಧ್ಯಾಪಕರು | 31–01–2022 | ಡೀನರು ಸಮಾಜ ವಿಜ್ಞಾನ ನಿಖಾಯ | 31–01–2022 | 28–01–2022 |
| 4) | ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ | ಡಾ. ದೇವರಾಜು ಕೆ.ಎಸ್. ಪ್ರಾಧ್ಯಾಪಕರು, | 14–02–2022 | ಡಾ. ಸಿ. ಎಂ. ಕಮನಾವಳ್ಳಿ, ಪ್ರಾಧ್ಯಾಪಕರು, | 15–02–2022 | 14–02–2022 |
| 5) | ಹಿಂದಿ ಅಧ್ಯಯನ ವಿಭಾಗ | ಡಾ. ಎಸ್. ಕೆ. ಪವಾರ, ಪ್ರಾಧ್ಯಾಪಕರು, | 28–02–2022 | ಡಾ. ಎಸ್. ಕೆ. ಪವಾರ, ಪ್ರಾಧ್ಯಾಪಕರು, | 01–03–2022 | 14–02–2022 |
| 6) | ತತ್ವಶಾಸ್ತ್ರ ಅಧ್ಯಯನ ವಿಭಾಗ | ಡಾ. ಎಂ.ಎ. ಜಾಲಿಹಾಳ, ಪ್ರಾಧ್ಯಾಪಕರು | 31–03–2022 (ನಿವೃತ್ತಿ ದಿನಾಂಕ) | ಡಾ. ಕೆ.ವಿ. ಜುಕ್ತಿಮಠ, ಪ್ರಾಧ್ಯಾಪಕರು | 31–03–2022 | 29–03–2022 |
| 7) | ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ | ಡಾ. ಎನ್. ಶಿವಣ್ಣ, ಪ್ರಾಧ್ಯಾಪಕರು | 24–04–2022 | ಡಾ. ಪುಲಕೇಶಿ. ಎಮ್. ಬಿರಾದಾರ, ಪ್ರಾಧ್ಯಾಪಕರು | 25–04–2022 | 22–04–2022 |
| 8) | ಮಾನವಶಾಸ್ತ್ರ ಅಧ್ಯಯನ ವಿಭಾಗ | ಡೀನರು ಸಮಾಜ ವಿಜ್ಞಾನ ನಿಖಾಯ | ---- | ಡಾ. ಟಿ.ಟಿ. ಬಸವನಗೌಡ, ಪ್ರಾಧ್ಯಾಪಕರು | 28–04–2022 | 28–04–2022 |
| 9) | ಗಣಿತಶಾಸ್ತ್ರ ಅಧ್ಯಯನ ವಿಭಾಗ | ಡಾ. ಹರೀಶಚಂದ್ರ ರಮಾನೆ, ಪ್ರಾಧ್ಯಾಪಕರು | 30–04–2022 | ಡಾ. ಪ್ರಕಾಶಗೌಡ ಜಿ. ಪಾಟೀಲ, ಪ್ರಾಧ್ಯಾಪಕರು | 01–05–2022 | 30–04–2022 |
| 10) | ಇತಿಹಾಸ & ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ | ಡಾ. ಎಲ್.ಪಿ. ಮಾರುತಿ, ಪ್ರಾಧ್ಯಾಪಕರು | 30–04–2022 | ಡಾ. ಎಸ್.ವಾಯ್. ಮುಗಳಿ, ಪ್ರಾಧ್ಯಾಪಕರು | 01–05–2022 | 30–04–2022 |
| 11) | ರಸಾಯನಶಾಸ್ತ್ರ ಅಧ್ಯಯನ ವಿಭಾಗ | ಡಾ. ಎಮ್.ವಾಯ್. ಕರಿದುರಗನವರ, ಪ್ರಾಧ್ಯಾಪಕರು | 06–05–2022 | ಡಾ. ಜೆ. ಸೀತಾರಾಮಪ್ಪ, ಪ್ರಾಧ್ಯಾಪಕರು | 07–05–2022 | 04–05–2022 |

ಕುಲಸಚಿವರು

ಕುಲಪತಿಗಳು

| ಅ.ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ ದಿನಾಂಕ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 12) | ಅರ್ಥಶಾಸ್ತ್ರ ಅಧ್ಯಯನ ವಿಭಾಗ | ಡಾ. ಬಿ.ಹೆಚ್. ನಾಗೂರ್, ಪ್ರಾಧ್ಯಾಪಕರು, | 30-04-2022 | ಡೀನರು ಸಮಾಜ ವಿಜ್ಞಾನ ನಿಕಾಯ | 30-04-2022 | 30-04-2022 |
| | | ಡೀನರು, ಸಮಾಜ ವಿಜ್ಞಾನ ನಿಕಾಯ | 24-05-2022 | ಡಾ. ಶಿವಾನಂದ ಬಿ. ನಾರಿ, ಸಹ-ಪ್ರಾಧ್ಯಾಪಕರು | 25-05-2022 | 25-05-2022 |
| 13) | ಸಮಾಜಶಾಸ್ತ್ರ ಅಧ್ಯಯನ ವಿಭಾಗ | ಡಾ(ಶ್ರೀಮತಿ). ಜಯಶ್ರೀ, ಪ್ರಾಧ್ಯಾಪಕರು | 31-05-2022 | ಡಾ. ಶೌಕತ್ ಅಝೀಮ್, ಪ್ರಾಧ್ಯಾಪಕರು | 01-06-2022 | 31-05-2022 |

ಆದ್ದರಿಂದ, ಮೇಲ್ಕಾಣಿಸಿದಂತೆ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರ ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–17: ವಿಷಯ–:** ಪ್ರವೇಶ ನಿಯಮಾವಳಿಗಳನ್ನು ಉಲ್ಲಂಘಿಸಿ ಬಿ.ಎ 6ನೇ ಸೆಮಿಸ್ಟರ್ ಫಲಿತಾಂಶ ಪ್ರಕಟಿಸಲು ಉಪ ಸಮಿತಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

**ಟಿಪ್ಪಣಿ:**

1. ಶ್ರೀ. ಬಸವರಾಜ ತರಲಗಟ್ಟಿ, ಕೆ.ಇ.ಬೋರ್ಡ ಕಲಾ ಮಹಾವಿದ್ಯಾಲಯ, ಧಾರವಾಡ ಇವರು 6ನೇ ಸೆಮಿಸ್ಟರ್ ಫಲಿತಾಂಶವನ್ನು ಪ್ರಕಟಿಸುವ ಸಲುವಾಗಿ ಈಗಾಗಲೇ ಸಿಂಡಿಕೇಟ ನಿರ್ಣಯಿಸಿರುವ ದಂಡವನ್ನು ವಿಧಿಸುವ ಬಗ್ಗೆ ಇರುವ ನಿಯಮಾವಳಿಗಳನ್ನು ಪರಿಶೀಲಿಸಿ ದಂಡ ವಿಧಿಸುವ ಬಗ್ಗೆ ವರದಿಗಳನ್ನು ಸಿಂಡಿಕೇಟಗೆ ಸಲ್ಲಿಸುವ ಕುರಿತು ಶ್ರೀ. ಸುಧೀಂದ್ರ ದೇಶಪಾಂಡೆ, ಸಿಂಡಿಕೇಟ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಉಪಸಮಿತಿಯು ದಿನಾಂಕ: 08.02.2022 ಮತ್ತು ದಿನಾಂಕ: 12.02.2022ರಂದು ಸಭೆಗಳನ್ನು ಪರೀಕ್ಷಾ ವಿಭಾಗದಲ್ಲಿ ಜರುಗಿಸಿ, ಸುದೀರ್ಘವಾಗಿ ಚರ್ಚಿಸಿ ದಿನಾಂಕ: 02.03.2022ರಂದು ಈ ಕೆಳಗಿನಂತೆ ವರದಿ ಸಲ್ಲಿಸಿರುವುದನ್ನು ತಮ್ಮ ಅವಗಾಹನೆಗಾಗಿ ಮಂಡಿಸಲಾಗಿದೆ.

2. ಗಣಕಯಂತ್ರ ವಿಭಾಗದಲ್ಲಿ ನಿಯಮಾನುಸಾರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷಾ ಅರ್ಜಿಗಳನ್ನು ತುಂಬಲು ಅವಕಾಶ ಮಾಡಿಕೊಡಲು ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡುಗಳನ್ನು ಅಳವಡಿಸಿಕೊಳ್ಳಲು ಗಣಕಯಂತ್ರ, ವಿಭಾಗದವರಿಗೆ ಟಿಪ್ಪಣಿ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

3. ನಿಯಮಾನುಸಾರ ಪ್ರತಿ ಪರೀಕ್ಷಾ ಅರ್ಜಿಗಳನ್ನು ಪರಿಶೀಲಿಸಿ/ಧೃಡೀಕರಿಸಿ ಕಳುಹಿಸುವದು ಆಯಾ ಮಹಾವಿದ್ಯಾಲಯದ/ಪ್ರಾಚಾರ್ಯರ ಜವಾಬ್ದಾರಿಯಾಗಿರುವುದರಿಂದ ಇನ್ನು ಮುಂದೆ ಇಂತಹ ಪ್ರಕರಣಗಳಿಗೆ ಅವಕಾಶಕೊಡದಂತೆ ಕೂಲಂಕುಶವಾಗಿ ಪರಿಶೀಲಿಸಿ/ ಧೃಡೀಕರಿಸಿ ಕಳುಹಿಸಲು ಕ್ರಮಕೈಕೊಳ್ಳಬೇಕೆಂದು ಸೂಚಿಸಿ. ಪ್ರಸ್ತುತ ಪರೀಕ್ಷಾ ಶುಲ್ಕ/ಅಂಕಪಟ್ಟಿ ಶುಲ್ಕ/ಪ್ರೊಸೆಸಿಂಗ್ ಶುಲ್ಕ ಸೇರಿ ಒಟ್ಟು ಮೊತ್ತದ 5 ಪಟ್ಟು ದಂಡ ಶುಲ್ಕವನ್ನು ಆಕರಿಸಲು ಕೆ.ಇ.ಬೋರ್ಡಿನ ಮಹಾವಿದ್ಯಾಲಯಕ್ಕೆ ತಿಳಿಸುವದು. (ಉದಾ ಬಿ.ಎ ಕೋರ್ಸಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ 715+ ಅಂಕಪಟ್ಟಿ ಶುಲ್ಕ 130+ ಅಂತರ್ಜಾಲ ಪ್ರೊಸೆಸಿಂಗ್ ಶುಲ್ಕ ಒಟ್ಟು : 935 ರೂ X 5 ಪಟ್ಟು ದಂಡ ಶುಲ್ಕ ಎಂದು 935 X 5=4675).

4. ಶ್ರೀ. ಬಸವರಾಜ ತರಲಗಟ್ಟಿ ಈ ವಿದ್ಯಾರ್ಥಿಗೆ ಪ್ರಸ್ತುತ ಸದ್ಯದ ಪರೀಕ್ಷಾ ಶುಲ್ಕ/ ಅಂಕಪಟ್ಟಿ ಶುಲ್ಕ/ ಪ್ರೊಸೆಸಿಂಗ್ ಶುಲ್ಕದ ಒಟ್ಟು ಮೊತ್ತದ 2 ಪಟ್ಟು ದಂಡ ಶುಲ್ಕವನ್ನು ಆಕರಿಸಲು ನಿರ್ಣಯಿಸಲಾಗಿದೆ. (ಉದಾ ಬಿ.ಎ ಕೋರ್ಸಿಗೆ ಸಂಬಂಧಿಸಿದಂತೆ, ಪರೀಕ್ಷಾ ಶುಲ್ಕ 715+ ಅಂಕಪಟ್ಟಿ ಶುಲ್ಕ 130+ ಅಂತರ್ಜಾಲ ಪ್ರೊಸೆಸಿಂಗ್ ಶುಲ್ಕ ಒಟ್ಟು : 935 ರೂ X 2 ಪಟ್ಟು ದಂಡ ಶುಲ್ಕ ಎಂದು 935 X 2=1870).

5. ಮುಂದುವರೆದು, ಪರೀಕ್ಷಾ ವಿಭಾಗದ ವಿವಿಧ ವಿಭಾಗಗಳ ಕೋರ್ಸಗಳಲ್ಲಿ ಇಂತಹದೆ ಪ್ರಕರಣಗಳು (Similar) ಟರ್ಮಗ್ಯಾಪ್ ಆದಂತಹ ವಿದ್ಯಾರ್ಥಿಗಳು ನಿಯಮಗಳನ್ನು ಉಲ್ಲಂಘಿಸಿ ಪರೀಕ್ಷೆಗೆ ಕುಳಿತು ಫಲಿತಾಂಶ ಪ್ರಕಟಿಸಲು ಕೋರಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಶಿಕ್ಷಣ ಮುಂದುವರೆಸುವ ದೃಷ್ಟಿಯಿಂದ ಆಯಾ ಕೋರ್ಸಗಳಿಗೆ ಪ್ರಸ್ತುತ ವರ್ಷದಲ್ಲಿ ನಿಗದಿಪಡಿಸಿದ ಪರೀಕ್ಷಾ ಶುಲ್ಕ/ ಅಂಕಪಟ್ಟಿ ಶುಲ್ಕ/ ಪ್ರೊಸೆಸಿಂಗ್ ಶುಲ್ಕ ಒಟ್ಟು ಸೇರಿ, ಅದರ ಎರಡು ಪಟ್ಟು ವಿದ್ಯಾರ್ಥಿಯಿಂದ ದಂಡ ಶುಲ್ಕ ಆಕರಿಸುವದು. ಮತ್ತು 5 ಪಟ್ಟು ಮಹಾವಿದ್ಯಾಲಯದಿಂದ ದಂಡ ಶುಲ್ಕ ಆಕರಿಸಬಹುದೆಂದು ಹಾಗೂ ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಬೇಕೆಂದು ಸಮಿತಿಯು ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

6. ಆದ್ದರಿಂದ ಸದರಿ ವಿಷಯ ಕುರಿತು ಉಪ ಸಮಿತಿ ನಿರ್ಣಯಿಸಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

ಪ್ರವೇಶ ನಿಯಮಾವಳಿಗಳನ್ನು ಉಲ್ಲಂಘಿಸಿ ಬಿ.ಎ 6ನೇ ಸೆಮಿಸ್ಟರ್ ಫಲಿತಾಂಶ ಪ್ರಕಟಿಸಲು ಉಪ ಸಮಿತಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಸಮಿತಿಯ ಶಿಫಾರಸ್ಸಿನಂತೆ ಕ್ರಮವಹಿಸಲು ಸೂಚಿಸಿತು.

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-34: ವಿಷಯ: 2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಮತ್ತು 2022-23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000ರ ಅಧಿನಿಯಮ ಪರಿಚ್ಛೇದ 29(h) ರ ಪ್ರಕಾರ ಸಿಂಡಿಕೇಟ ಸಭೆಯ ಪರಿಶೀಲನೆ ಮತ್ತು ಅನುಮೋದನೆ ಕುರಿತು

ಟಿಪ್ಪಣಿ

ಕರ್ನಾಟಕ ವಿಶ್ವವಿದ್ಯಾಲಯದ 2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಹಾಗೂ 2022-23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ದಿನಾಂಕ 6-4-2022 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ಮುಂದೆ ಕ.ರಾ.ವಿ. ಕಾಯ್ದೆ 2000, ಪರಿಚ್ಛೇದ 32(3)(ii) ರಂತೆ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಈ ಕೆಳಗಿನಂತೆ ಮಂಡಿಸಲಾಗಿತ್ತು.

1. 2021-22ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ನಿರ್ವಹಣಾ ಅನುದಾನ ಹೆಚ್ಚುವರಿ ಅನುದಾನ ಒಟ್ಟು **ರೂ.188.69** ಕೋಟಿ ಹಾಗೂ ಆಂತರಿಕ ಆದಾಯ **ರೂ.79.98** ಕೋಟಿ ಸೇರಿಸಿ ಒಟ್ಟಾರೆ ಎಲ್ಲ ಮೂಲಗಳಿಂದ ಬರುವ ಒಟ್ಟು ಆದಾಯ **ರೂ.267.67** ಕೋಟಿ ಎಂದು ನಿರೀಕ್ಷಿಸಲಾಗಿದೆ. ಅದರಂತೆ, 2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜಿನಲ್ಲಿ ಒಟ್ಟು ವೆಚ್ಚ **ರೂ.286.00** ಕೋಟಿ ಅಂದಾಜು ಮಾಡಲಾಗಿದೆ. ಆದ್ದರಿಂದ 2021-22ರ ಪರಿಷ್ಕೃತ ಆಯವ್ಯಯದಲ್ಲಿ ಒಟ್ಟಾರೆ **ರೂ.-18.33** ಕೋಟಿಗಳ ಕೊರತೆ ಅಂದಾಜಿಸಲಾಗಿದೆ.
2. ಕರ್ನಾಟಕ ಸರ್ಕಾರಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ 2022-23ನೇ ಸಾಲಿಗೆ ಅನುದಾನ **ರೂ.200.28** ಕೋಟಿಗಳಷ್ಟು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯಕ್ಕೆ 2022-23ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ **ರೂ.144.71** ಕೋಟಿಗಳಷ್ಟು ನಿರ್ವಹಣಾ ಅನುದಾನವನ್ನು ನಿಗದಿಪಡಿಸಲಾಗಿದೆ. ಆದ್ದರಿಂದ, ವಿಶ್ವವಿದ್ಯಾಲಯಕ್ಕೆ ಕೊರತೆಯಾಗುವ **ರೂ.55.57** ಕೋಟಿ ಮೊತ್ತಕ್ಕೆ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗುವುದು.2022-23ನೇ ಸಾಲಿಗೆ ಒಟ್ಟಾರೆ ಆಂತರಿಕ ಎಲ್ಲ ಮೂಲಗಳಿಂದ ಬರುವ ಆದಾಯ ಒಟ್ಟು **ರೂ. 76.51** ಕೋಟಿಗಳೆಂದು ಅಂದಾಜಿಸಲಾಗಿದೆ.
3. ಒಟ್ಟಾರೆಯಾಗಿ 2022-23ನೇ ಸಾಲಿಗೆ ಸರ್ಕಾರದಿಂದ ನಿಗದಿಪಡಿಸಿದ ಅನುದಾನ **ರೂ.144.71** ಕೋಟಿ (ವೇತನ ಮತ್ತು ಇತರೆ ಭತ್ಯೆಗಳಿಗಾಗಿ ರೂ.94.71ಕೋಟಿ ಹಾಗೂ ಪಿಂಚಣಿಗಾಗಿ ರೂ. 50.00 ಕೋಟಿ),ಪರಿಷ್ಕೃತ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾದ ಅನುದಾನದ ಮೊತ್ತ **ರೂ.55.58** ಕೋಟಿ ಮತ್ತು ಇತರೆ ವಸೂಲಾತಿ **ರೂ.0.25** ಕೋಟಿ ಸೇರಿಸಿ ಒಟ್ಟು **ರೂ. 200.54** ಕೋಟಿಗಳು ಮತ್ತು ಆಂತರಿಕ ಆದಾಯ **ರೂ.76.51** ಕೋಟಿ, **ಒಟ್ಟು ರೂ. 277.05** ಕೋಟಿಗಳು ರಶೀದಿಗಳೆಂದು ಅಂದಾಜಿಸಲಾಗಿದೆ.
4. 2022-23ನೇ ಸಾಲಿಗೆ ವೇತನ ಮತ್ತು ಇತರೆ ಭತ್ಯೆಗಳು, ಪಿಂಚಣಿ ವಂತಿಕೆ, ಎನ್.ಪಿ.ಎಸ್.ವಂತಿಕೆ, ಗಳಿಕೆ ರಜೆ/ರಜೆ ನಗದೀಕರಣಕ್ಕಾಗಿ ಹಾಗೂ ಪಿಂಚಣಿ/ಪಿಂಚಣಿ ಸೌಲಭ್ಯಕ್ಕಾಗಿ ಒಟ್ಟು ವೆಚ್ಚ **ರೂ. 200.28** ಕೋಟಿ ಮತ್ತು ಆಂತರಿಕ ವೆಚ್ಚಗಳು (ಸಾಮಾನ್ಯ ನಿಧಿ/ಪರೀಕ್ಷಾ ನಿಧಿ) **ರೂ. 95.50** ಕೋಟಿ ಒಟ್ಟು **ರೂ. 295.78 ಕೋಟಿ** ವೆಚ್ಚಗಳನ್ನು ಅಂದಾಜಿಸಲಾಗಿದೆ. ಈ ರೀತಿಯಾಗಿ **ಒಟ್ಟು ರೂ.18.73 ಕೋಟಿ** ಕೊರತೆ ಆಗುವದೆಂದು ಅಂದಾಜು ಮಾಡಲಾಗಿದೆ.

**ದಿನಾಂಕ 6-4-2022ರಂದು ಜರುಗಿದ ಹಣಕಾಸು ಸಮಿತಿ ಸಭೆಯ ಠರಾವು ಸಂಖ್ಯೆ 8ರ ನಿರ್ಣಯ ಈ ಕೆಳಗಿನಂತಿರುತ್ತದೆ.**

**ಹಣಕಾಸು ಅಧಿಕಾರಿಗಳು 2021-22 ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಮತ್ತು 2022-23 ನೇ ಸಾಲಿನ ಆಯವ್ಯಯ ಅಂದಾಜುಗಳ ಪ್ರಸ್ತಾವನೆ ಮಂಡಿಸಿದರು. 2022-23 ನೇ ಸಾಲಿನ ಆಯವ್ಯಯ ಅಂದಾಜುಗಳ ಕುರಿತು ಸುಧೀರ್ಘವಾಗಿ ಚರ್ಚಿಸಲಾಯಿತು.**

**ಠರಾವು**

ಕುಲಸಚಿವರು

ಕುಲಪತಿಗಳು

1. 2022-23 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ ಸಂಖ್ಯೆ "1482 ಅತಿಥಿ ಉಪನ್ಯಾಸಕರ ವೇತನ" ಕ್ಕೆ ಈಗಾಗಲೇ ಅಂದಾಜಿಸಲಾದ ಮೊತ್ತ ರೂ.13.00 ಕೋಟಿಗಳು ಸದರ ಸಾಲಿಗೆ ಕೊರತೆಯಾಗುವುದೆಂದು ತಿಳಿಸಿ ಮತ್ತು ಕಲಂ 2 ರಲ್ಲಿ ಪ್ರಸ್ತಾಪಿಸಿದಂತೆ 2021-22 ನೇ ಸಾಲಿಗೆ ರೂ.50.00 ಲಕ್ಷಗಳನ್ನು ಸದರ ಲೆಕ್ಕ ಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಿಕೊಂಡಿರುವುದರಿಂದ 2022-23 ನೇ ಸಾಲಿಗೆ ರೂ.14.00 ಕೋಟಿಗಳನ್ನು ಮೀಸಲೀಡಲು ಪ್ರಸ್ತಾವನೆ ಮಂಡಿಸಲಾಯಿತು. ಸದರ ಪ್ರಸ್ತಾವನೆಗೆ ಹಣಕಾಸು ಸಮಿತಿಯು ಒಪ್ಪಿಗೆಯನ್ನು ಸೂಚಿಸಿತು.
2. 2022-23 ನೇ ಸಾಲಿನ ಕೆಲ ಲೆಕ್ಕ ಶೀರ್ಷಿಕೆಗಳಾದ 1472, 1490 ಮತ್ತು 1491 ರಲ್ಲಿ ಹಿಂದಿನ ಸಾಲುಗಳಲ್ಲಿ ಯಾವುದೇ ಖರ್ಚು ಆಗದೇ ಇದ್ದರೂ ಪ್ರಸಕ್ತ ಸಾಲಿನಲ್ಲಿ ಆಯವ್ಯಯ ಪ್ರಾವಧಾನ ಮಾಡಿದ ಕುರಿತು ಚರ್ಚಿಸಲಾಯಿತು. ಸದರ ವಿಷಯಕ್ಕೆ ಮಾನ್ಯ ಕುಲಪತಿಗಳು ಸೂಕ್ತ ವಿವರಣೆಯನ್ನು ನೀಡಿದ್ದರಿಂದ ಹಣಕಾಸು ಸಮಿತಿ ಸಭೆಯು ಒಪ್ಪಿಗೆ ಸೂಚಿಸಿತು.
3. ಆಯವ್ಯಯ ಅಂದಾಜುಗಳನ್ನು ತಯಾರಿಸುವಾಗ ತಾತ್ಕಾಲಿಕ, ಆರಂಭಿಕ ಹಾಗೂ ಮುಕ್ತಾಯ ಶಿಲ್ಕುಗಳನ್ನು ಗಣನೆಗೆ ತೆಗೆದುಕೊಳ್ಳಲು ಉಪ-ಕಾರ್ಯದರ್ಶಿಗಳಾದ ಶ್ರೀ. ವೆಂಕಟೇಶಯ್ಯ ಅವರು ಸೂಚಿಸಿದರು.
4. ಮಾನ್ಯ ಉಪ-ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಮಾನ್ಯ ಉಪ-ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಕೊರತೆಯಾಗುವ ಪಿಂಚಣಿ ಅನುದಾನಕ್ಕೆ ಎಲ್ಲ ಪಿಂಚಣಿದಾರರ ವಿವರಗಳೊಂದಿಗೆ ಪುನರ್ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

   ತದನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000 ಪರಿಚ್ಛೇಧ 32 (3) (ii) ರ ಮೇರೆಗೆ ಹಣಕಾಸು ಸಮಿತಿ ಸಭೆಯು 2021-22 ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಮತ್ತು 2022-23 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಹಣಕಾಸು ಸಮಿತಿಯು ಕೂಲಂಕುಷವಾಗಿ ಹಾಗೂ ಸುಧೀರ್ಘವಾಗಿ ಚರ್ಚಿಸಿ ಒಪ್ಪಿಗೆಯನ್ನು ಸೂಚಿಸಿತು.

ಹಣಕಾಸು ಸಮಿತಿ ನಿರ್ಣಯದ ಮತ್ತು ಸಲಹೆಯ ಮೇರೆಗೆ 2022-23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಈ ಕೆಳಗಿನಂತೆ ಸಿದ್ಧಪಡಿಸಲಾಗಿದೆ.

2022-23ನೇ ಸಾಲಿಗೆ ಸರ್ಕಾರದಿಂದ ನಿಗದಿಪಡಿಸಿದ ಅನುದಾನ **ರೂ.144.71** ಕೋಟಿ (ವೇತನ ಮತ್ತು ಇತರೆ ಭತ್ಯೆಗಳಿಗಾಗಿ ರೂ.94.71 ಕೋಟಿ ಹಾಗೂ ಪಿಂಚಣಿಗಾಗಿ ರೂ. 50.00 ಕೋಟಿ),ಪರಿಷ್ಕೃತ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾದ ಅನುದಾನದ ಮೊತ್ತ **ರೂ.55.58** ಕೋಟಿ ಮತ್ತು ಇತರೆ ವಸೂಲಾತಿ **ರೂ.0.25** ಕೋಟಿ ಸೇರಿಸಿ ಒಟ್ಟು **ರೂ. 200.54** ಕೋಟಿಗಳು ಮತ್ತು ಆಂತರಿಕ ಆದಾಯ **ರೂ.77.02** ಕೋಟಿ, **ಒಟ್ಟು ರೂ. 277.56** ಕೋಟಿಗಳು ರಶೀದಿಗಳೆಂದು ಅಂದಾಜಿಸಲಾಗಿದೆ.

2022-23ನೇ ಸಾಲಿಗೆ ವೇತನ ಮತ್ತು ಇತರೆ ಭತ್ಯೆಗಳು, ಪಿಂಚಣಿ ವಂತಿಕೆ, ಎನ್.ಪಿ.ಎಸ್.ವಂತಿಕೆ, ಗಳಿಕೆ ರಜೆ/ರಜೆ ನಗದೀಕರಣಕ್ಕಾಗಿ ಹಾಗೂ ಪಿಂಚಣಿ/ಪಿಂಚಣಿ ಸೌಲಭ್ಯಕ್ಕಾಗಿ ಒಟ್ಟು ವೆಚ್ಚ **ರೂ. 200.28** ಕೋಟಿ ಮತ್ತು ಆಂತರಿಕ ವೆಚ್ಚಗಳು (ಸಾಮಾನ್ಯ ನಿಧಿ/ಪರೀಕ್ಷಾ ನಿಧಿ) **ರೂ. 97.01** ಕೋಟಿ ಒಟ್ಟು **ರೂ. 297.29 ಕೋಟಿ** ವೆಚ್ಚಗಳನ್ನು ಅಂದಾಜಿಸಲಾಗಿದೆ. ಈ ರೀತಿಯಾಗಿ **ಒಟ್ಟು ರೂ.-19.73 ಕೋಟಿ** ಕೊರತೆ ಆಗುವದೆಂದು ಅಂದಾಜು ಮಾಡಲಾಗಿದೆ.

ಮುಂದುವರೆದು, ಹಣಕಾಸು ಸಮಿತಿ ಸಲಹೆಯ ಮೇರೆಗೆ 2022-23ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ತಾತ್ಕಾಲಿಕ ಆರಂಭಿಕ ಶಿಲ್ಕು ಮತ್ತು ಮುಕ್ತಾಯ ಶಿಲ್ಕುಗಳನ್ನು ಗಣನೆಗೆ ತೆಗೆದುಕೊಂಡಿರುತ್ತದೆ.

2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಮತ್ತು 2022-23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000ರ ಅಧಿನಿಯಮ ಪರಿಚ್ಛೇದ 29(h) ರ ಪ್ರಕಾರ ಸಿಂಡಿಕೇಟ ಸಭೆಯ ಪರಿಶೀಲನೆ ಮತ್ತು ಅನುಮೋದನೆ ಪಡೆಯಬೇಕಾಗುತ್ತದೆ. ನಂತರ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸಿಗಾಗಿ ಸಲ್ಲಿಸಲಾಗುವುದು.

ಕುಲಸಚಿವರು

ಕುಲಪತಿಗಳು

ಆದ್ದರಿಂದ, 2021–22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಮತ್ತು 2022–23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಿಂಡಿಕೇಟ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**2021–22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಮತ್ತು 2022–23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000ರ ಅಧಿನಿಯಮ ಪರಿಚ್ಛೇದ 29(h) ರ ಪ್ರಕಾರ ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–35: ವಿಷಯ: Placing Of Annual Accounts of Karnatak University, Dharwad for the year 2020-2021 before Syndicate for its consideration and approval.

**Note:**

As per the section 32(3)(1)the Draft Annual Accounts of Karnatak University for the year 2020-2021 has been prepared and placed before Finance Committee held on 6-4-2022 for its approval and the Finance Committee resolved as under.

**Finance Committee Dated 6-4-2022 Item no 07 Resolution.**

"2020–21 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಹಣಕಾಸು ಸಮಿತಿಯು ಒಪ್ಪಿಗೆಯನ್ನು ಸೂಚಿಸಿತು."

As per the approval of the Finance Committee meeting held on 6-4-2022 and as per the section 47(1) of the KSU Act-2000 the Annual Accounts for the year 2020-2021 are to be placed before for Syndicate for consideration and approval.

**The copy of the Annual Accounts-2020-2021 has been enclosed along with file.**

Hence, the Annual Accounts of Karnatak University for the year 2020-2021 are placed before Syndicate for its consideration and approval.

## ನಿರ್ಣಯ

**Syndicate considered and approved the Annual Accounts of Karnatak University, Dharwad for the year 2020-2021**

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-49: ವಿಷಯ: 2022-23ನೇ ಸಾಲಿನ 3 ವರ್ಷದ ಎಲ್.ಎಲ್.ಬಿ. ಕೋರ್ಸಿನ ಪ್ರಥಮ ವರ್ಷಕ್ಕೆ ಪ್ರವೇಶ ಪ್ರಕ್ರಿಯೆ ಮುಂದುವರೆಸುವ ಕುರಿತು.

**ಟಿಪ್ಪಣೆ:**

ದಿನಾಂಕ 02.07.2022 ರಂದು ಜರುಗಿದ ಕಾನೂನು ಅಭ್ಯಾಸಸೂಚಿ ಮಂಡಳಿ ಶಿಫಾರಸ್ ಹಾಗೂ ದಿನಾಂಕ 30.07.2022 ರಂದು ಜರುಗಿದ ಕಾನೂನು ನಿಖಾಯದ ಶಿಫಾರಸ್ಸಿನ ಅನುಸಾರ 3 ವರ್ಷದ ಕಾನೂನು ಪದವಿ ಪ್ರವೇಶವನ್ನು ಸ್ಥಗಿತಗೊಳಿಸುವ ಸಂಬಂಧ ದಿನಾಂಕ 21.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ಈ ಕೆಳಗಿನಂತಿದೆ:

**<u>Academic Council Res. No. 57, dated 21.08.2020</u>**

The Academic Council approved the resolution of Special Law Faculty regarding Suspension of 3 Year LL.B course from 2020-21 onwards.

ಈ ಮೇಲಿನ ನಿರ್ಣಯದಂತೆ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ 3 ವರ್ಷದ ಎಲ್.ಎಲ್.ಬಿ. ಕೋರ್ಸ ಸ್ಥಗಿತಗೊಳಿಸುವ ಪ್ರಕ್ರಿಯೆಯ ಪರಾಮರ್ಶನೆಗಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಉಪಸಮಿತಿಯನ್ನು ರಚಿಸಲಾಗಿತ್ತು. ಕೋರ್ಸ ಸ್ಥಗಿತಗೊಳಿಸುವ ಕ್ರಮ ಜಾರಿ ಮಾಡಬಾರದೆಂದು ವಿದ್ಯಾರ್ಥಿ ಸಂಘಟನೆಗಳು ಮನವಿ ಸಲ್ಲಿಸಿದವು. ಸದರ ಪ್ರಸ್ತಾವನೆ ಪರಿಶೀಲನೆಗಾಗಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕಾನೂನು ನಿಖಾಯದ ಡೀನರು ಹಾಗೂ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಭೆಯು ದಿನಾಂಕ 03.11.2020 ರಂದು ಮಾನ್ಯ ಕುಲಪತಿಗಳ ಕೊಠಡಿಯಲ್ಲಿ ಜರುಗಿತು. ಸಭೆಯಲ್ಲಿ ಈ ಕುರಿತಂತೆ ಸುದೀರ್ಘವಾಗಿ ಚರ್ಚಿಸಿದ ತೀರ್ಮಾನಗಳು ಈ ಕೆಳಗಿನಂತಿವೆ:

1. 3 ವರ್ಷದ ಎಲ್.ಎಲ್.ಬಿ. ಕೋರ್ಸನ್ನು 2020-21ನೇ ಶೈಕ್ಷಣಿಕ ಸಾಲಿಗೆ ಮಾತ್ರ ಮುಂದುವರೆಸಬೇಕು.
2. ಆಡಿಟೋರಿಯಂ ಕಟ್ಟಡ ಕಟ್ಟಲು ಸಿ.ಎಸ್.ಐ.ಆರ್. ಫಂಡನಿಂದ ಅನುದಾನ ಸಂಗ್ರಹಣೆಯ ಕ್ರಮವಹಿಸಲು ಈ ಕೆಳಗಿನವರಿಗೆ ಕೋರಲಾಯಿತು.
   (1) ಡಾ. ಡಾ. ಕಲ್ಮೇಶ ಹಾವೇರಿಪೇಠ, ಸಿಂಡಿಕೇಟ್ ಸದಸ್ಯರು
   (2) ಶ್ರೀ ಜಕ್ಕನಗೌಡ ಸಿಂಡಿಕೇಟ್ ಸದಸ್ಯರು
3. ಪ್ರವೇಶ ಕುರಿತಂತೆ ಅಧಿಸೂಚನೆ ಪ್ರಕ್ರಿಯೆ ಕೈಗೊಳ್ಳುವುದು.

ಮೇಲಿನ ನಿರ್ಣಯದಂತೆ ಸಿಂಡಿಕೇಟ್ ಸಭೆಗೆ ಕಲಂನ್ನು ಮಂಡಿಸಲಾಗಿತ್ತು.

**ಸಿಂಡಿಕೇಟ್ ಠರಾವು ಸಂ. 24, ದಿನಾಂಕ 21.11.2020**

"ವಿಶೇಷ ಕಾನೂನು ನಿಖಾಯ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯಗಳಂತೆ 2020-21ನೇ ಸಾಲಿಗೆ ಮೂರು ವರ್ಷದ ಎಲ್.ಎಲ್.ಬಿ. ಕೋರ್ಸನ್ನು ಸ್ಥಗಿತಗೊಳಿಸಿರುವ ವಿಷಯವು ಸಭೆಯಲ್ಲಿ ಪ್ರಸ್ತಾಪವಾದಾಗ, 2020-21ನೇ ಸಾಲಿಗೆ ಮಾತ್ರ ಸದರಿ ಕೋರ್ಸನ್ನು ಮುಂದುವರೆಸುವುದು. ಈ ಸಾಲಿನಲ್ಲಿ ರಾಷ್ಟ್ರಮಟ್ಟದ ನಿರ್ಣಯ ಬಂದಲ್ಲಿ ಅದನ್ನು ನೋಡಿಕೊಂಡು ಮುಂದಿನ ನಿರ್ಧಾರ ಕೈಗೊಳ್ಳುವುದು. ಒಂದು ವೇಳೆ 2020-21ನೇ ಸಾಲಿನಲ್ಲಿ ನಿರ್ಣಯ ಬರದಿದ್ದಲ್ಲಿ ಮುಂದಿನ ವರ್ಷದಿಂದ ಮೂರು ವರ್ಷದ ಎಲ್.ಎಲ್.ಬಿ. ಕೋರ್ಸನ್ನು ಸ್ಥಗಿತಗೊಳಿಸುವುದು ಎಂದು ಸಿಂಡಿಕೇಟ್ ನಿರ್ಧರಿಸಿತು".

ಮೇಲಿನ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ 2020-21ನೇ ಸಾಲಿಗೆ ಪ್ರವೇಶ ನೀಡಿ ರಾಷ್ಟ್ರಮಟ್ಟದ ನಿರ್ಣಯ ಬರದಿದ್ದಲ್ಲಿ 3 ವರ್ಷದ, ಎಲ್.ಎಲ್.ಬಿ. ಕೋರ್ಸನ್ನು ಸ್ಥಗೀತಗೊಳಿಸುವುದು ಎಂದು ನಿರ್ಣಯಿಸಿದಂತೆ ಮುಂದಿನ ಕ್ರಮ ವಹಿಸಲು ಪ್ರಾಚಾರ್ಯರು, ಕ.ವಿ.ವಿ. ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯ, ಧಾರವಾಡ ಇವರಿಗೆ ಈ ಕಚೇರಿ ಪತ್ರ ಸಂ. 1706, ದಿನಾಂಕ 26.12.2021ರ ಮೂಲಕ ತಿಳಿಸಲಾಗಿತ್ತು. ಆದರೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಧಾರವಾಡ ಇವರು ಮೂರು ವರ್ಷದ ಕಾನೂನು ಪದವಿಯನ್ನು ಮುಂದುವರೆಸುವ ಕುರಿತಂತೆ ದಿನಾಂಕ 01.12.2021 ರಂದು ಆಗ್ರಹಿಸಿದ ಹಿನ್ನೆಲೆಯಲ್ಲಿ ಸದರ ಕೋರ್ಸನ್ನು ಪ್ರಸ್ತುತ 2021-22ನೇ ಸಾಲಿಗೂ ಸಹ ಮುಂದುವರೆಸಲು ಕ್ರಮಕೈಗೊಳ್ಳಲಾಗಿರುತ್ತದೆ.

ಕುಲಸಚಿವರು

ಕುಲಪತಿಗಳು

ಪ್ರಾಚಾರ್ಯರು, ಕ.ವಿ.ವಿ. ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯ, ಧಾರವಾಡ ಇವರು ದಿನಾಂಕ 20.05.2022ರ ಪತ್ರದಂತೆ ಪ್ರಸ್ತುತ ಮಹಾವಿದ್ಯಾಲಯದಲ್ಲಿ ಬೋಧಕ ಸಿಬ್ಬಂದಿ, ಕೊಠಡಿ, ಡೆಸ್ಕ್ ಹಾಗೂ ಇತರೇ ಮೂಲಭೂತ ಸೌಕರ್ಯಗಳ ಕೊರತೆ ಇರುವುದನ್ನು ಹಾಗೂ ರಾಷ್ಟ್ರಮಟ್ಟದ ನಿರ್ಣಯ ಬಂದ ಬಗ್ಗೆ ಮಾಹಿತಿ ಲಭ್ಯವಿಲ್ಲದಿರುವುದನ್ನು ತಿಳಿಸುತ್ತ, 2022–23ನೇ ಶೈಕ್ಷಣಿಕ ಸಾಲಿನಿಂದ 3 ವರ್ಷದ ಎಲ್.ಎಲ್.ಬಿ. ಕೋರ್ಸನ್ನು ಮುಂದುವರೆಸುವ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಪರಿಶೀಲನೆಗೆ ಮಂಡಿಸಲಾಗಿದೆ.

## ನಿರ್ಣಯ

**2022–23ನೇ ಸಾಲಿನ 3 ವರ್ಷದ ಎಲ್.ಎಲ್.ಬಿ. ಕೋರ್ಸಿನ ಪ್ರಥಮ ವರ್ಷಕ್ಕೆ ಪ್ರವೇಶ ಪ್ರಕ್ರಿಯೆ ಮುಂದುವರೆಸಲು ಸಿಂಡಿಕೇಟ ತೀರ್ಮಾನಿಸಿತು.**

ಕುಲಸಚಿವರು

ಕುಲಪತಿಗಳು

**ಈ ಕೆಳಕಂಡ ವಿಷಯಗಳನ್ನು ಚರ್ಚಿಸಲು ಸಮಯದ ಅಭಾವವಾದ ಕಾರಣ ಮುಂದೂಡಲಾಯಿತು**

**ಕಲಂ ಸಂಖ್ಯೆ-18: ವಿಷಯ-**: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ MTTM (Master of Tourism and Travel Management) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "ಶ್ರೀ ಬಸವರಾಜ ಸಿ. ಹಟ್ಟಿಹೊಳಿ" ಇವರ ಸ್ಮರಣಾರ್ಥ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಕುರಿತು ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಕಲಂ ಸಂಖ್ಯೆ-19: ವಿಷಯ-**: ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ **"ಪ್ರೊ. ಎಸ್.ಎಮ್.ವೃಷಭೇಂದ್ರಸ್ವಾಮಿ"** ಇವರ ಹೆಸರಿನಲ್ಲಿ ಪ್ರತಿವರ್ಷ ಉಪನ್ಯಾಸಮಾಲೆ ಕಾರ್ಯಕ್ರಮ ಜರುಗಿಸಲು ವಿಭಾಗ ಮಟ್ಟದಲ್ಲಿ ದತ್ತಿ ಉಪನ್ಯಾಸಮಾಲೆ ಸ್ಥಾಪನೆ ಮಾಡುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಕಲಂ ಸಂಖ್ಯೆ-20: ವಿಷಯ-**: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ (M.Sc Chemistry (inorganic chemistry theory paper) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"ಪ್ರೊ. ವಿ.ಕೆ. ರೇವಣಕರ"** ಇವರ ಹೆಸರಿನಲ್ಲಿ ಸುವರ್ಣ ಪದಕವನ್ನು ಸ್ಥಾಪನೆ ಮಾಡುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಕಲಂ ಸಂಖ್ಯೆ-21: ವಿಷಯ-**: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ M.Sc(Statistics) ಅಧ್ಯಯನ ವಿಷಯದಲ್ಲಿ **"ಶ್ರೀ ಅಡಿವೆಪ್ಪ ಥಡಿ ಹಾಗೂ ಮಾತೋಶ್ರೀ ಸಿದ್ದಮ್ಮ ಥಡಿ"** ಇವರ ಹೆಸರಿನಲ್ಲಿ ಪದಕವನ್ನು ಸ್ಥಾಪನೆ ಮಾಡುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಕಲಂ ಸಂಖ್ಯೆ-22: ವಿಷಯ-**: ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ **ಎಮ್.ಎ. (ಮ್ಯೂಸಿಕ್)** ಅಧ್ಯಯನ ವಿಷಯದಲ್ಲಿ **"ಪಂಡಿತ ಷಡಕ್ಷರಯ್ಯಾ ಎಸ್. ಗುಡ್ಡದಮಠ"** ಇವರ ಹೆಸರಿನಲ್ಲಿ ಪದಕವನ್ನು ಸ್ಥಾಪನೆ ಮಾಡುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಕಲಂ ಸಂಖ್ಯೆ-23: ವಿಷಯ-**: ದಿನಾಂಕ: 21-3-2022 ರಂದು ನಡೆದ ಸ್ಥಿರ ಆಸ್ತಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಪರಿಶೀಲಿಸುವುದು.

**ಕಲಂ ಸಂಖ್ಯೆ-24: ವಿಷಯ-**: ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿನ ವಿಶ್ವವಿದ್ಯಾಲಯದ ಆವರಣದಲ್ಲಿ ದೀನ ದಯಾಳ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ ಸಂಕೀರ್ಣ ನಿರ್ಮಾಣಕ್ಕೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ಉಚಿತವಾಗಿ ಜಮೀನನ್ನು ಒದಗಿಸಲು ಕೈಗೊಂಡ ಕ್ರಮವನ್ನು ದೃಢೀಕರಿಸುವುದಕ್ಕಾಗಿ ಸಿಂಡಿಕೇಟ ಸಭೆಗೆ ವಿಷಯ ಮಂಡಿಸುವುದು.

**ಕಲಂ ಸಂಖ್ಯೆ-25: ವಿಷಯ-**: ಡಾ. ಬಿ. ಬಸವನಗೌಡ, ಡೀನರು, ವಿಜ್ಞಾನ ನಿಖಾಯ ಇವರ ಅಧ್ಯಕ್ಷತೆ ಸಮಿತಿಯು ಬಿ.ಎಸ್ಸಿ 3ನೇ ಸೆಮೆಸ್ಟರ್ ರಸಾಯನಶಾಸ್ತ್ರ ವಿಷಯದ ಮೌಲ್ಯಮಾಪನ ಕಾರ್ಯದಲ್ಲಿ ಆದ ನ್ಯೂನ್ಯತೆಗಳ ಬಗ್ಗೆ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಆಡಳಿತ ಮಂಡಳಿ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–26 ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರ ಹಾಗೂ ಕರ್ನಾಟಕ ಕಲಾ ಮಹಾವಿದ್ಯಾಲಯದ ಆವರಣದ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಗೌರವಧನ/ಸಂಚಿತ ವೇತನವನ್ನು ಹೆಚ್ಚಿಸುವ ಕುರಿತು ಡಾ. ಎಸ್.ಸಿ. ಜಕ್ಕನಗೌಡ್ರ, ಸಿಂಡಿಕೇಟ್ ಸದಸ್ಯರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಕಲಂ ಸಂಖ್ಯೆ–27: ವಿಷಯ–:** ಶ್ರೀ.ಎಮ್.ವೆಂಕಟೇಶಕುಮಾರ, ಸಹಾಯಕ ಪ್ರಾಧ್ಯಾಪಕರು (ನಿವೃತ್ತ), ಇವರ ಸೇವಾವಧಿಯಲ್ಲಿ ವಿಸ್ತರಿಸಲ್ಪಟ್ಟ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯ ಬಗ್ಗೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರ ದಿನಾಂಕ: 06.02.2020, ದಿನಾಂಕ:05.01.2022 ರ ತಮ್ಮ ಪತ್ರಗಳಲ್ಲಿ ನೀಡಿದ ನಿರ್ದೇಶನ ಹಾಗೂ ಶ್ರೀ.ಜಯಪ್ರಕಾಶ ಬದಾಮಿ ಸಿಂಡಿಕೇಟ್ ಸದಸ್ಯರು ಕವಿವಿ, ಧಾರವಾಡ ಇವರ ದಿನಾಂಕ: 21.03.2022 ರ ಪ್ರಸ್ತಾವನೆ ಮತ್ತು ಪದ್ಮಶ್ರೀ ಪ. ಶ್ರೀ. ಎಮ್. ವೆಂಕಟೇಶಕುಮಾರ, (ಖ್ಯಾತ ಹಿಂದುಸ್ತಾನಿ ಸಂಗೀತಗಾರರು) ಸಹಾಯಕ ಪ್ರಾಧ್ಯಾಪಕರು (ನಿವೃತ್ತ) ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರ ದಿನಾಂಕ: 23.03.2022 ರ ಮನವಿ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸುವ ಕುರಿತು.

**ಕಲಂ ಸಂಖ್ಯೆ–28: ವಿಷಯ–:** Placing AQAR 2020-21 for consideration of Syndicate

**ಕಲಂ ಸಂಖ್ಯೆ–29: ವಿಷಯ–:** ಯುನಿವರ್ಸಿಟಿ ಪಬ್ಲಿಕ್ ಸ್ಕೂಲಿನ ವರದಾ ವಸತಿ ನಿಲಯಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಮಾನ್ಯತೆ ದೊರೆಯುವವರೆಗೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ಮರು ಪಾವತಿಸಿಕೊಳ್ಳಲು ಸಮಾಜ ಕಲ್ಯಾಣ ಇಲಾಖೆಯು ಅವಕಾಶ ಕಲ್ಪಿಸಿಕೊಡುವವರೆಗೆ ಈ ಹಿಂದಿನಂತೆ 2022–23 ನೇ ಸಾಲಿನ ಶೈಕ್ಷಣಿಕ ಅವಧಿಗೆ ವರದಾ ವಸತಿ ನಿಲಯದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ/ಉಪಹಾರವನ್ನು ವಿತರಿಸುವ ಮತ್ತು ಭೋಜನಾ ವೆಚ್ಚವನ್ನು ವಿಶ್ವವಿದ್ಯಾಲಯದ ಬಜೆಟ್ ಹೆಡ್ ನಂಬರ 2114 ರಿಂದ ಭರಿಸುವ ವಿಷಯವನ್ನು ಪರಿಶೀಲಿಸುವ ಕುರಿತು.

**ಕಲಂ ಸಂಖ್ಯೆ–30: ವಿಷಯ–:** ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣಪತ್ರಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯ ನಡುವಳಿಯನ್ನು ಆಡಳಿತ ಮಂಡಳಿಯ ಸಭೆಯ ಪರಿಶೀಲನೆಗಾಗಿ ಕುರಿತು.

**ಕಲಂ ಸಂಖ್ಯೆ–31: ವಿಷಯ–:** ಡಾ. ಎಂ.ಪಿ. ರಮೇಶ, ಪ್ರಾಧ್ಯಾಪಕರು, ಸ್ನಾತಕೋತ್ತರ ತತ್ವಶಾಸ್ತ್ರ ಅಧ್ಯಯನ ವಿಭಾಗ, ಕವಿವಿ ಧಾರವಾಡ ಇವರು ಮೈಸೂರು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮಾಡುವಂತೆ ವಿನಂತಿಸಿ ದಿ.22.10.2021 ರಂದು ಸಲ್ಲಿಸಿದ ಪತ್ರವನ್ನು ಪರಿಶೀಲಿಸುವ ಕುರಿತು.

**ಕಲಂ ಸಂಖ್ಯೆ–32: ವಿಷಯ–:** Consideration of the report submitted by Sri.Ravikumar Maliger (Syndicate Member) and Chairman of the committee reconstituted for preparation of Seniority list of Teachers of P.G Departments and Constituent Colleges of Karnatak University, Dharwad.

ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ–33: ವಿಷಯ–: ಶ್ರೀ.ಎ. ಕೆ. ಸಾಳವಿ ಇವರ ವೈದ್ಯಕೀಯ ಚಿಕಿತ್ಸೆ ಪಡೆದ ಬಿಲ್ಲುಗಳ ಮೊತ್ತ ರೂ.1,31,063/– ಗಳನ್ನು ವಿಶ್ವವಿದ್ಯಾಲಯದಿಂದ ಮರುಪಾವತಿ ಮಾಡುವ ವಿಷಯವಾಗಿ ಪರಿಶೀಲನೆ ಕುರಿತು.

ಕಲಂ ಸಂಖ್ಯೆ–36: ವಿಷಯ–: ಕೆ.ಸಿ.ಡಿ.ಆವರಣದಲ್ಲಿರುವ ಕೆನರಾ ಬ್ಯಾಂಕಿನಲ್ಲಿ ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ ತೆರೆದ ಸಾಮಾನ್ಯ ನಿಧಿ ಎಸ್.ಬಿ. ಖಾತೆಯನ್ನು ಸಿಂಡಿಕೇಟ ದೃಢೀಕರಣಕ್ಕಾಗಿ ಮಂಡಿಸುವ ಕುರಿತು.

ಕಲಂ ಸಂಖ್ಯೆ–37: ವಿಷಯ–: ಕರ್ನಾಟಕ ವಿಶ್ವವಿದ್ಯಾಲಯದ ಕೇಂದ್ರ, ಕಾರ್ಯಾಲಯದಲ್ಲಿರುವ 08 ಹಳೆಯ ವಾಹನಗಳು ಹಾಗೂ ನಿರುಪಯುಕ್ತ ವಸ್ತುಗಳನ್ನು ಟೆಂಡರ್ ಮೂಲಕ ವಿಲೇವಾರಿ ಮಾಡಿದ ವಿಷಯವಾಗಿ ಮಾನ್ಯ ಕುಲಪತಿಗಳು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆ ಕುರಿತು.

<u>ಕಲಂ ಸಂಖ್ಯೆ–38: ವಿಷಯ–</u>: ಯುಸಿಕ್ ವಿಭಾಗದಲ್ಲಿ ಪ್ರಸ್ತುತ ಖಾಲಿ ಇರುವ ಜೂನಿಯರ್ ಇಂಜನೀಯರ್ ಹುದ್ದೆಗೆ ಪದೋನ್ನತಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 21.04.2022 ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯಲ್ಲಿ ಶ್ರೀ ಜಿ.ಡಿ. ಕುಂದರಗಿ ಇವರನ್ನು ಕಿರಿಯ ಇಂಜಿನಿಯರ್ ಹುದ್ದೆಗೆ ದಿನಾಂಕ: 01.06.2018 ರಿಂದ ಪದೋನ್ನತಿಗೆ ಶಿಫಾರಸ್ಸು ಮಾಡಿ ಅವರ ವೇತನವನ್ನು ದಿನಾಂಕ: 01.06.2018 ರಿಂದ ಕಾಲ್ಪನಿಕವಾಗಿ ನಿಗದಿಪಡಿಸಲು ಹಾಗೂ ಆರ್ಥಿಕ ಸೌಲಭ್ಯಗಳನ್ನು ಅವರಿಗೆ ಕಿರಿಯ ಇಂಜಿನಿಯರ್ ಹುದ್ದೆಗೆ ಪದೋನ್ನತಿ ನೀಡಿದ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಅನ್ವಯವಾಗುವಂತೆ ವಿಸ್ತರಿಸಲು ಶಿಫಾರಸ್ಸು ಮಾಡಿದ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸಿದ ಕುರಿತು.

<u>ಕಲಂ ಸಂಖ್ಯೆ–39: ವಿಷಯ–</u>: 2015–16ನೇ ಸಾಲಿನಿಂದ 2019–20ರ ವರೆಗೆ ಸಂಯೋಜನಾ ಮುಂದುವರಿಕೆ ಅರ್ಜಿ ಸಲ್ಲಿಸದೇ ಇರುವ ಮಲ್ಲಿಕಾರ್ಜುನ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯಕ್ಕೆ ದಂಡದ ಮೊತ್ತ ನಿಗದಿಗೊಳಿಸುವ ಕುರಿತು.

<u>ಕಲಂ ಸಂಖ್ಯೆ–40: ವಿಷಯ–</u>: 2021–22ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು, ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಸಂಖ್ಯೆ ಹೆಚ್ಚಳಕ್ಕಾಗಿ, ಮಹಾವಿದ್ಯಾಲಯದ ಹೆಸರು ಬದಲಾವಣೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸಗಳ ಕುರಿತು ವಿದ್ಯಾವಿಷಯಕ್ ಪರಿಷತ್‌ನಲ್ಲಿ ಕೈಗೊಂಡ ಕ್ರಮದ ಕುರಿತು ಆಡಳಿತಾತ್ಮಕ ಅನುಮೋದನೆಗಾಗಿ ಮಂಡಿಸಿದೆ.

<u>ಕಲಂ ಸಂಖ್ಯೆ–41: ವಿಷಯ–</u>: ಡಾ. ನಾಗರಾಜ.ಆರ್.ಹಳ್ಳಿಯವರ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕವಿವಿ ಧಾರವಾಡ ಇವರು ಈ ಕಚೇರಿ ಪತ್ರ ನಂ. ಕೆಯು/ ಡಿಪಿಎಆರ್(ಟಿ–1)/2021/288 ದಿನಾಂಕ: 27.05.2021 ನ್ನು ಪ್ರಶ್ನಿಸಿ ತಮ್ಮ ಪತ್ರ ದಿನಾಂಕ 28.06.2021 ರ ಮೂಲಕ ತಮ್ಮ ವಿಶ್ವವಿದ್ಯಾಲಯದ ಸೇವೆಯನ್ನು ಹಳೇ ಪಿಂಚಣಿ ಯೋಜನೆಯಲ್ಲಿ ಪರಿಗಣಿಸುವ ಬಗ್ಗೆ ಕೆ.ಎಸ್.ಯು ಅಧಿನಿಯಮ 2000 ಸೆಕ್ಷನ್ 15(5) ರನ್ವಯ ತಮ್ಮ ಮನವಿಯನ್ನು (Appeal) ಮಾನ್ಯ ಕುಲಾಧಿಪತಿಗಳ ಮುಂದೆ ಪರಿಶೀಲನೆಗೆ ಮಂಡಿಸಲು ವಿನಂತಿಸಿದ ವಿಷಯವನ್ನು ಮತ್ತು ಡಾ. ನಾಗರಾಜ. ಆರ್. ಹಳ್ಳಿಯವರ ಇವರ ಸೇವೆಯನ್ನು ಹಳೇ ಪಿಂಚಣಿ ಯೋಜನೆಯಲ್ಲಿ ಪರಿಗಣಿಸುವ ಬಗ್ಗೆ ಶ್ರೀ.ರವಿಕುಮಾರ ಮಾಳಿಗೇರ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ದಿನಾಂಕ: 11.09.2021 ರ ಪ್ರಸ್ತಾವನೆಯನ್ನು ಪರಿಶೀಲಿಸುವ ಕುರಿತು.

ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–42: ವಿಷಯ–:** ಕಾಮದೇನು ಬಿ.ಸಿ.ಎ. ಮಹಾವಿದ್ಯಾಲಯ, ಕಾರವಾರ ಇವರು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ 2019–20ನೇ ಶೈಕ್ಷಣಿಕ ಸಾಲಿನ ಬಿ.ಸಿ.ಎ. ಕೋರ್ಸಿಗೆ ಮಿತಿಗಿಂತ ಹೆಚ್ಚಿಗೆ ಪ್ರವೇಶ ನೀಡಿ ಪ್ರವೇಶ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಮರು–ಪರಿಶೀಲನೆ ಮಾಡುವ ವಿಷಯಕ್ಕೆ ಸಂಬಂದಿಸಿದಂತೆ, ಉಪಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮರುಪರಿಶೀಲಿಸುವ ಕುರಿತು.

**ಕಲಂ ಸಂಖ್ಯೆ–43: ವಿಷಯ–:** ಆರ್.ಎನ್.ಶೆಟ್ಟಿ, ಪ್ರಥಮ ದರ್ಜೆ ಮಹಾವಿದ್ಯಾಲಯ, ಮುರಡೇಶ್ವರ ಈ ಕಾಲೇಜಿಗೆ ವಿಶ್ವವಿದ್ಯಾಲಯದ (ಸಿ.ಡಿ.ಸಿ ವಿಭಾಗದಿಂದ) ಸಂಯೋಜನೆ ಮಂಜೂರಾತಿ ಪೂರ್ವದಲ್ಲಿಯೇ ಪ್ರಥಮ ವರ್ಷದ ಬಿಬಿಎ/ಬಿಸಿಎ ಕೋರ್ಸಿನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವುದಕ್ಕೆ ದಿನಾಂಕ: 10.04.2022ರ ಅನೌಪಚಾರಿಕ ಸಭೆಯ ನಡವಳಿಕೆಯಂತೆ ದಂಡದ ಶುಲ್ಕ ವಿಧಿಸಲು ಪರಿಶೀಲಿಸುವ ಕುರಿತು.

**ಕಲಂ ಸಂಖ್ಯೆ–44: ವಿಷಯ–:** ದಿನಾಂಕ 10–04–2022 ರಂದು ಜರುಗಿದ ಸಿಂಡಿಕೇಟ್ ಸದಸ್ಯರ ಅನೌಪಚಾರಿಕ ಸಭೆಯ ನಡಾವಳಿಯಂತೆ ಕ್ರಮವಹಿಸುವ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸುವ ಕುರಿತು.

**ಕಲಂ ಸಂಖ್ಯೆ–45: ವಿಷಯ–:** To approve the proposal for the establishment of School of Pharmaceutical Sciences at Karnatak University Campus, Dharwad

**ಕಲಂ ಸಂಖ್ಯೆ–46: ವಿಷಯ–:** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಭಾರತಿ ಗಾಣಿಗೇರ ಇವರ ಸೇವೆಯನ್ನು ನಿಯೋಜನೆಯ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ಪಡೆದುಕೊಳ್ಳುವ ಕುರಿತು.

**ಕಲಂ ಸಂಖ್ಯೆ–47: ವಿಷಯ–:** ಕರ್ನಾಟಕ ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆಯ ಪ್ರಾಚಾರ್ಯರ ಹುದ್ದೆಗೆ ಪದೋನ್ನತಿ ನೀಡುವ ವಿಷಯವಾಗಿ ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸುವ ಕುರಿತು.

**ಅಧ್ಯಕ್ಷರ ಅಪ್ಪಣೆಮೇರೆಗೆ ಬಂದ**
**ವಿಷಯ ಪಟ್ಟಿ**

**ಕಲಂ ಸಂಖ್ಯೆ–48: ವಿಷಯ–:** ದಿನಾಂಕ. 21.06.2022 ರಂದು ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಪರಿಶೀಲನೆ ಹಾಗೂ ಸಮಿತಿಯ ಶಿಫಾರಸ್ಸಿನ ಪ್ರಕಾರ ಕವಿವಿ ಬೋಧಕೇತರ ನೌಕರರಿಗೆ ಮುಂಬಡ್ತಿ ಆದೇಶಗಳನ್ನು ಜಾರಿ ಮಾಡುವ ಪ್ರಸ್ತಾನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿದೆ.

ಕುಲಸಚಿವರು                    ಕುಲಪತಿಗಳು